ಸಂಪುಟ 01 | ಸಂಚಿಕೆ 150 | ಬುಧವಾರ 22 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಭೂ ದಿನ**

1970 ರಲ್ಲಿ ಆಧುನಿಕ ಪರಿಸರ ಚಳವಳಿಯ ಜನ್ಮ ವಾರ್ಷಿಕೋತ್ಸವವನ್ನು ಗುರುತಿಸಲು ಪ್ರತಿ ವರ್ಷ ಏಪ್ರಿಲ್ 22 ರಂದು ಈ ದಿನವನ್ನು ಆಚರಿಸಲಾಗುತ್ತದೆ. ವಿಶ್ವದಲ್ಲಿ ಜೀವ ಸಾಧ್ಯವಿರುವ ಏಕೈಕ ಗ್ರಹ ಭೂಮಿಯಾಗಿದ್ದು, ಈ ನೈಸರ್ಗಿಕ ಆಸ್ತಿಯನ್ನು ಕಾಪಾಡಿಕೊಳ್ಳುವುದು ಅವಶ್ಯಕ. ಗ್ರಹದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ಭೂ ದಿನವನ್ನು ಆಚರಿಸಲಾಗುತ್ತದೆ.

**2) ರಾಮಾನುಜಾಚಾರ್ಯ ಜಯಂತಿ**

ಶ್ರೀ ರಾಮಾನುಜಾಚಾರ್ಯ ಜಯಂತಿಯು ಪ್ರಸಿದ್ಧ ವೈಷ್ಣವ ಸಂತ ಮತ್ತು ತತ್ವಜ್ಞಾನಿ ಶ್ರೀ ರಾಮಾನುಜಾಚಾರ್ಯರ ಜನ್ಮದಿನವನ್ನು ಆಚರಿಸುವ ಒಂದು ಪ್ರಮುಖ ಹಿಂದೂ ಹಬ್ಬವಾಗಿದೆ. ಇದು ಸಾಮಾಜಿಕ ಸಮಾನತೆ, ಭಕ್ತಿ ಮತ್ತು ಜ್ಞಾನದ ಸಂದೇಶವನ್ನು ಎತ್ತಿಹಿಡಿಯುತ್ತದೆ.ಅಂದಿನ ಕಾಲದಲ್ಲೇ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ದನಿ ಎತ್ತಿದವರು. ಸಮಾಜದ ಹಿಂದುಳಿದ ವರ್ಗದವರನ್ನು ದೇವಾಲಯಕ್ಕೆ ಕರೆತರುವ ಮೂಲಕ ಸಮಾನತೆ ಸಾರಿದರು.

## ಸುಭಾಷಿತ

ಜಗತ್ತಿನ ಅರ್ಧ ಭಾಗದಲ್ಲಿ ಕತ್ತಲೆ ಮತ್ತೆ ಅರ್ಧ ಭಾಗದಲ್ಲಿ ಬೆಳಕು ಇರುವಂತೆ, ಜೀವನದಲ್ಲಿಯೂ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇರುತ್ತವೆ. ಬೆಳಕಿನಲ್ಲಿ ಇದ್ದು ಒಳ್ಳೆಯವರಾಗಿ ಉಳಿಯುವುದು ನಮ್ಮ ಕರ್ತವ್ಯ.

–ಅನಿತಾ ನಾಯರ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಬಿಸಿಲ ತಾಪಕ್ಕೆ ಇಳುವರಿ ಕುಂಠಿತ, ಏರಿದ ತರಕಾರಿ ಬೆಲೆ



**ಬೆಂಗಳೂರು/ತುಮಕೂರು: ಬಿಸಿಲಿನ ತಾಪಮಾನ ಏರಿಕೆಯಿಂದ ತರಕಾರಿ ಬೆಳೆಗಳ ಮೇಲೆ ಭಾರೀ ಹೊಡೆತ ಬಿದ್ದು ಇಳುವರಿ ಕುಂಠಿತವಾಗಿ ತರಕಾರಿಗಳ ಬೆಲೆ ಹೆಚ್ಚಾಗಿದ್ದು, ಬೀನ್?ಸ ಶತಕ ಬಾರಿಸಿದೆ. ರಾಜ್ಯಾದ್ಯಂತ ಬಿಸಿಲಿನ ರೌದ್ರಾವತಾರಕ್ಕೆ ಜನರು ತತ್ತರಿಸಿದ್ದು, ತರಕಾರಿಗಳ ಬೆಲೆ ಏರಿಕೆ ಗ್ರಾಹಕರ ಜೇಬನ್ನು ಸುಡುತ್ತಿದೆ.**


ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಿಂದಾಗಿ ರಾಜ್ಯದಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾದ ಹಿನ್ನೆಲೆಯಲ್ಲಿ ಹಲವು ಹೋಟೆಲ್, ರೆಸ್ಟೋರೆಂಟ್‌ಗಳು, ಪಿಜಿಗಳು ತಾತ್ಕಾಲಿಕವಾಗಿ ಬಂದ್ ಆಗಿದ್ದವು. ಈ ವೇಳೆ ತರಕಾರಿ ಬೆಲೆ ಇಳಿದಿತ್ತು. ಆದರೆ, ಈಗ ಸ್ವಲ್ಪಮಟ್ಟದಲ್ಲಿ ಚೇತರಿಸಿಕೊಂಡಿದ್ದು, ಮದುವೆ , ಜಾತ್ರೆ , ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿದ್ದು, ಮಾರುಕಟ್ಟೆಗಳಲ್ಲಿ ತರಕಾರಿಗೆ ಬೇಡಿಕೆ ಹೆಚ್ಚಾಗಿದ್ದು, ನೀರಿಕ್ಷಿತ ಪ್ರಮಾಣದಲ್ಲಿ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳವಾಗಿದೆ. ಕಳೆದ ವಾರಕ್ಕೆ ಹೊಲಿಸಿದರೆ ಪ್ರತಿ ತರಕಾರಿಗಳ ಬೆಲೆ ಕೆಜಿಗೆ 20 ರಿಂದ 30 ರೂ.ಗೆ ಹೆಚ್ಚಳವಾಗಿದೆ. ಈ ಭಾರಿ ತಾಪಮಾನ ಗರಿಷ್ಠ ಮಟ್ಟದಲ್ಲಿ ಏರಿಕೆಯಾಗಿದ್ದು, ಒಣಹವೆ ಹಾಗೂ ಬಿಸಿಲಿನ ತಾಪಕ್ಕೆ ಜನತೆ ತತ್ತರಿಸಿಹೊಗಿದ್ದಾರೆ. '

ಈ ನಡುವೆ ವಿದ್ಯುತ್ ಕೊರತೆ, ಕೊಳವೆಬಾವಿಗಳಲ್ಲಿ ಪಾತಾಳ ತಲುಪಿದ ಅಂತರ್ಜಲದಿಂದ ನೀರಿನ ಅಭಾವ ಸೃಷ್ಟಿಯಾಗಿದ್ದು, ತರಕಾರಿ ಬೆಳೆಗೆ ಬೇಕಾದ ಪೂರಕ ವಾತಾವರಣವಿಲ್ಲದ ಕಾರಣ ಇಳುವರಿಯಲ್ಲಿ ಭಾರೀ ಕುಂಠಿತವಾಗಿ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಯಾಗಿದೆ. ತರಕಾರಿ ಬೆಳೆಗೆ ಹೆಚ್ಚಾಗಿ ನೀರಿನ ಅವಶ್ಯಕತೆ ಇದ್ದು, ಅದರಲ್ಲೂ ಬೀನ್?ಸಗೆ ಹೆಚ್ಚಾಗಿ ತಂಪು ವಾತಾವರಣ ಹಾಗೂ ಹೆಚ್ಚಿನ ನೀರು ಬೆಕಾಗಿದೆ. ಆದರೆ, ಪ್ರಸ್ತುತ ಬಿಸಿಲಿನ ತಾಪಕ್ಕೆ ಬೆಳೆ ಉತ್ತಮವಾಗಿ ಬಾರದಿರುವುದರಿಂದ ಇಳುವರಿಯಲ್ಲಿ ಹೊಡೆತಬಿದ್ದಿದೆ. ಇದರಿಂದ ಕೆಜಿಗೆ 80 ರಿಂದ 100 ರೂ.ಗೆ? ಹೆಚ್ಚಳವಾಗಿದೆ.

ಕಳೆದ ವಾರ 20 ರೂ. ಮಾರಾಟವಾಗುತ್ತಿದ್ದ ಕೆಜಿ ಟೊಮ್ಯಾಟೋ ಈಗ 35 ರಿಂದ 40 ರೂ. ತಲುಪಿದೆ. ಅದೇ ರೀತಿ ಕ್ಯಾರೆಟ್ 50 ರಿಂದ 60ರೂ., ಕ್ಯಾಪ್ಸಿಕಂ 80, ಗೆಡ್ಡೆಕೋಸು 50ರೂ., ಆಲೂಗೆಡ್ಡೆ 40 ರೂ., ಬಿಟ್ರೂಟ್ 40ರೂ., ಹಾಗಲಕಾಯಿ 60ರೂ., ಸೌತೆಕಾಯಿ 50ರೂ., ಬದನೆಕಾಯಿ 40 ರೂ ಗೆ ಮಾರಾಟವಾಗುತ್ತಿದೆ.

10 ರೂ.ಗೆ ಒಂದು ನಿಂಬೆ: ಬಿಸಿಲಿನ ಝಳಕ್ಕೆ ಜನರು ತತ್ತರಿಸಿದ್ದು, ಹೆಚ್ಚಾಗಿ ತಂಪು ಪಾನೀಯಗಳ ಮೊರೆಹೊಗುತ್ತಿದ್ದಾರೆ. ಎಲ್ಲೆಡೆ ನಿಂಬೆ ಶರಬತ್ತು ಮಾರಾಟ ಹೆಚ್ಚಾಗಿದೆ. ಜೊತೆಗೆ ಮನೆಗಳಲ್ಲೂ ಸಹ ನಿಂಬೆಹಣ್ಣು ಬಳಸಲಾಗುತ್ತಿದೆ. ಬಿಸಿಲಿನ ತಾಪಕ್ಕೆ ನಿಂಬೆಕಾಯಿ ಗಿಡದಲ್ಲಿ ಕಚ್ಚದೆ ಎಳೆ ಕಾಯಿಗಳೇ ಉದುರುತ್ತಿವೆ. ಇದರಿಂದ ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ನಿಂಬೆಹಣ್ಣು ಬಾರದಿರುವುದರಿಂದ ಬೆಂಗಳೂರಿನಲ್ಲಿ ಚಿಲ್ಲರೆಯಾಗಿ 10ರೂ.ಗೆ ಒಂದು ಹಣ್ಣು ಮಾರಾಟ ಮಾಡಲಾಗುತ್ತಿದೆ.

# ಶ್ರೀ ಸಿದ್ದೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಭವ್ಯವಾಗಿ ಲೋಕಾರ್ಪಣೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಲಿಂಗಸಗೂರು ತಾಲೂಕಿನ ಸಮೀಪದ ವಂದಲಿ ಹೊಸೂರು ಗ್ರಾಮದಲ್ಲಿರುವ ಶ್ರೀ ಕ್ಷೇತ್ರದಲ್ಲಿ ಇಂದು ಬೆಳಗಿನ ಜಾವ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಸಿದ್ದೇಶ್ವರ ಮೂರ್ತಿ ಹಾಗೂ ನಂದಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಭಕ್ತಿಭಾವದಿಂದ ಭವ್ಯವಾಗಿ ನೆರವೇರಿತು.**

ಈ ಧಾರ್ಮಿಕ ಕಾರ್ಯಕ್ರಮವು ಶ್ರೀ ಮುಂಡರಗಿ ಮಲ್ಲಣ್ಣ ತಾತನವರ ಅಧ್ಯಕ್ಷತೆಯಲ್ಲಿ ನಡೆಯಿತು. ತೋಪಿನಕಟ್ಟೆ ಬ್ರಹನ್ ಮಠದ ಷಟಸ್ಥಳ ಸ್ವಾಮಿ ಅಭಿನವ ಗುರು ಗಜದಂಡ ಶಿವಚಾರ್ಯ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಪೂರ್ಣಾಹುತಿ ನೆರವೇರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಗಂಗಾ ಪೂಜೆ, ಗೋ ಪೂಜೆ, ಉಮಾ ಮಹೇಶ್ವರಿ ಪೂಜೆ, ಗಣಪತಿ ಪೂಜೆ, ನವಗ್ರಹ ಪೂಜೆ, ಪಂಚಕಳಸ ಪೂಜೆ ಸೇರಿದಂತೆ ವಿವಿಧ ಪೂಜಾ ವಿಧಿಗಳು ನೆರವೇರಿದವು. ನೂತನ ಮೂರ್ತಿಗಳಿಗೆ ರುದ್ರಾಭಿಷೇಕ ಹಾಗೂ ಹೋಮ-ಹವನಗಳು ಭಕ್ತಿಪೂರ್ವಕವಾಗಿ ನಡೆದವು.

ವೇದಮೂರ್ತಿ ವಿವೇಕಾನಂದ ಶಾಸ್ತ್ರಿ (ಸುರಪುರ) ಹಾಗೂ ವೇದಮೂರ್ತಿ ಪ್ರಭು ಲಿಂಗಯ್ಯ ಶಾಸ್ತ್ರಿ (ಅಮಾದಿಹಾಳ) ಅವರ ಸಾನಿಧ್ಯದಲ್ಲಿ ಪ್ರತಿಷ್ಠಾಪನಾ ವಿಧಿ ನೆರವೇರಿತು. ಈ ಸಂದರ್ಭದಲ್ಲಿ ಆಮರಗುಡ್ಡಪ್ಪ ತಾತ, ಯಮನಪ್ಪ ಯಲಗಟ್ಟಿ, ಬೀರಪ್ಪ ಜಾಲಹಳ್ಳಿ, ಸಿದ್ದಪ್ಪ ವಂದಲಿ, ಅಂಬಯ್ಯ ಯಲಗಟ್ಟಿ, ಸಿದ್ದಣ್ಣ ಮೂಡಲಗುಂಡ, ಗಿಡ್ಡಪ್ಪ ಶಾಸ್ತ್ರಿ, ಶಿವಪ್ಪ ಸೇರಿದಂತೆ ಊರಿನ ಹಿರಿಯರು, ಮುಖಂಡರು ಮತ್ತು ಅನೇಕ ಭಕ್ತಾದಿಗಳು ಉಪಸ್ಥಿತರಿದ್ದರು.

## ಶ್ರೀರಾಮ ಮಂದಿರದಲ್ಲಿ ಶಂಕರಾಚಾರ್ಯ ಜಯಂತಿ; ಪ್ರಶಸ್ತಿ ಪ್ರಧಾನ

ನೈಜ್ಯ ದೆಸೆ ನ್ಯೂಸ್



**ನಗರದ ಬ್ರಾಹ್ಮಣರ ಓಣಿಯ ಶ್ರೀರಾಮ ಮಂದಿರದಲ್ಲಿ ಮಂಗಳವಾರ ಶಂಕರಾಚಾರ್ಯರ ಜಯಂತಿ ನಿಮಿತ್ಯ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸೇವೆಗೈದ ಸಾಧಕರಿಗೆ 'ಶ್ರೀ ಶಂಕರ ಅನುಗ್ರಹ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಬೆಳಿಗ್ಗೆ ಶ್ರೀರಾಮ ಮಂದಿರದಲ್ಲಿ ಸುಪ್ರಭಾತ, ನಿರ್ಮಾಲ್ಯ ವಿಸರ್ಜನೆ, ರುದ್ರಾಭಿಷೇಕ ನಡೆಯಿತು.**

ನಂತರ ಉಪ್ಪಾರವಾಡಿ ಶಾಲೆಯಿಂದ ಶ್ರೀರಾಮ ಮಂದಿರದವರೆಗೆ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆ ವಿವಿಧ ಭಜನಾ ಮಂಡಳಿಗಳ ಭಜನೆಯೊಂದಿಗೆ ನಡೆಯಿತು. ಮಧ್ಯಾಹ್ನ ಪಂಡಿತ ರಾಮಚಂದ್ರ ಸೋಮಯಾಜಿ 'ಆದಿಗುರು ಶಂಕರಾಚಾರ್ಯರ ಜೀವನ ಚರಿತ್ರೆ' ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಧಾರ್ಮಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸುಕ್ಷೇತ್ರ ಅಂಬಾಮಠದ ಅರ್ಚಕ ಬ್ರಹ್ಮಾನಂದ ಭಟ್, ಶ್ರೀರಾಮ ಮಂದಿರದ ಅರ್ಚಕ ಸುಬ್ಬಶಾಸ್ತ್ರಿ, ಸಾಮಾಜಿಕ ಸೇವೆಯಲ್ಲಿ ನಿರತರಾಗಿರುವ ಯುವ ಮುಖಂಡರಾದ ಭೀಮಸೇನ ಜಾಗೀರ್ದಾರ್ ಹಾಗೂ ಆನಂದ ಗೌರ್ಕರ್ ಅವರಿಗೆ' ಶ್ರೀ ಶಂಕರ ಅನುಗ್ರಹ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಮಾಜದ ಅಧ್ಯಕ್ಷ ಗೋವಿಂದರಾವ್ ಕುಲಕರ್ಣಿ, ಮಠಾಧಿಕಾರಿ ನರಸಿಂಹ ಆಚಾರ್ಯ ಪುರೋಹಿತ, ಪಂಡಿತ್ ರಾಮಕೃಷ್ಣ ಆಚಾರ್ಯ ಗೋನ್ವಾರ, ಎಂ.ಕೆ. ಗೋರ್ಕರ, ಕಿಶನ್ ರಾವ್ ಕುಲಕರ್ಣಿ, ರಾಘವೇಂದ್ರರಾವ್ ಕುಲಕರ್ಣಿ, ನಾಗೇಂದ್ರ ಕುಮಾರ್ ಸಾಹುಕಾರ, ವೆಂಕಟರಾವ್ ಬಂಡಿ, ಗುರುರಾಜ ಜಾಹೀರದಾರ್, ವೆಂಕಟರಾವ್ ಚನ್ನಳ್ಳಿ, ರಾಘವೇಂದ್ರರಾವ್ ಚನ್ನಳ್ಳಿ, ನರಸಿಂಹಮೂರ್ತಿ, ಪ್ರಹ್ಲಾದ ಗುಡಿ, ಭೀಮಸೇನಾಚಾರ್ ಪುರೋಹಿತ, ರಾಘವೇಂದ್ರ ಆಚಾರ್ಯ ಮಸ್ಕಿ ,ಅವಿನಾಶ ಬಂಡಿ, ಸತೀಶ ನವಲಿ ಸೇರಿದಂತೆ ಹಲವಾರು ಮುಖಂಡರು ಇದ್ದರು.

## ತುಗ್ಗಲದಿನ್ನಿ: ಮೇಲ್ಛಾವಣಿ ಇಲ್ಲದ ಮನೆಯಲ್ಲಿ ಬದುಕು ರಂಗಮ್ಮ ನಾಯಕ ಬೇಕಿದೆ ಸಹಾಯಹಸ್ತ

ನೈಜ್ಯ ದೆಸೆ ನ್ಯೂಸ್



**ಮಸ್ಕಿ: ತುಗ್ಗಲದಿನ್ನಿ ಗ್ರಾಮದ ಎಪ್ಪತ್ತು ವರ್ಷದ ರಂಗಮ್ಮ ನಾಯಕ ಅಜ್ಜಿ ಬದುಕಿನ ಸಂಧ್ಯಾಕಾಲದಲ್ಲಿ ಆಸರೆ ಇಲ್ಲದೆ, ಮೇಲ್ಛಾವಣಿ ಇಲ್ಲದ ಮನೆಯಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ವಾಸ ಮಾಡುತ್ತಿದ್ದು, ಇಲ್ಲಿಯ ಜನಪ್ರತಿನಿಧಿಗಳು, ಅಧಿಕಾರಿಗಳು ಯಾವುದೇ ಸಹಾಯ ಹಸ್ತವಿಲ್ಲ.**

ನೋಡಿದವರಿಗೆ ಕೆಲವೊಬ್ಬರ ಜೀವನ ಅದೆಷ್ಟು ಕಷ್ಟದ್ದಾಗಿರುತ್ತದೆ ಎಂಬುದನ್ನು ಮನ ಕಲಕುವಂತಿತ್ತು. ಮೂರು ಜನ ಹೆಣ್ಣು ಮಕ್ಕಳು, ಒಬ್ಬ ಮಗ ಇದ್ದರು ಯಾವುದಕ್ಕೂ ಪ್ರಯೋಜನವಿಲ್ಲ, ಅವರಿಂದ ಯಾವುದೇ ಸಹಾಯ ಸಹಕಾರ ಇಲ್ಲ, ನನ್ನ ಪಾಡಿಗೆ ನಾನೇ ಜೀವನ ಸಾಗಿಸುತ್ತಿದ್ದು, ಈಗಂತೂ ಹೆಚ್ಚಿನ ತಾಪಮಾನ ಬಿಸಿಲು ಬಹಳಷ್ಟು ತೊಂದರೆಯಾಗಿದೆ ಎಂದು ಹೇಳುತ್ತಾಳೆ. ರಂಗಮ್ಮ ನಾಯಕಳಿಗೆ ಈ ಮೊದಲು ಗುಡಿಸಲು ಇತ್ತು. ಆದರೆ ಗಾಳಿ ಮಳೆಯಿಂದ ಅದು ಕಿತ್ತು ಹೋಗಿದ್ದು. ಸರಿ ಸುಮಾರ ಹತ್ತು ವರ್ಷಗಳಿಂದ ಗಾಳಿ, ಮಳೆ, ಬಿಸಿಲು ಮದ್ಯೆ ಜೀವನ ನಡೆಸುತ್ತಿದ್ದು, ಈಗಲಾದರೂ ಸಂಬಂಧಿಸಿದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ರಂಗಮ್ಮಳಿಗೆ ಸೂರು ಒದಗಿಸುವ ಮೂಲಕ ಮಾನವಿಯತೆಗೆ ಸಾಕ್ಷಿಯಾಗಬೇಕಾಗಿದೆ.

# ಜಾಲಹಳ್ಳಿಯಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ: ಭವ್ಯ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್



ದೇವದುರ್ಗ: ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು. ಧಾರ್ಮಿಕ ವಿಧಿವಿಧಾನ ಹಾಗೂ ಭವ್ಯ ಮೆರವಣಿಗೆ ಪ್ರತಿ ವರ್ಷದ ಸಂಪ್ರದಾಯದಂತೆ ಇಂದು ಸಂಜೆ 5:30ಕ್ಕೆ ಪ್ಯಾಟಿ ಬಸವಣ್ಣದೇವರ ಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಸುಂದರವಾಗಿ ಅಲಂಕರಿಸಲ್ಪಟ್ಟ ಜೋಡೆತ್ತು ಬಂಡೆಯಲ್ಲಿ ಬಸವೇಶ್ವರರ ಭಾವಚಿತ್ರವನ್ನಿಟ್ಟು ಮೆರವಣಿಗೆಗೆ ಚಾಲನೆ ನೀಡಲಾಯಿತು.

ಈ ಭವ್ಯ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಾದ: ರಂಗನಾಥ ಗುಡಿ ಈಶ್ವರ ಗುಡಿ ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಬಸವೇಶ್ವರ ವೃತ್ತವನ್ನು ತಲುಪಿತು. ಬಸವೇಶ್ವರ ವೃತ್ತದಲ್ಲಿ ವಿವಿಧ ಮುಖಂಡರು ಬಸವಣ್ಣನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಬಸವೇಶ್ವರರ ಜಯಂತಿ ಅಂಗವಾಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್ ಖುರೇಶಿ ಅವರು: 'ಕಾಯಕವೇ ಕೈಲಾಸ' ಎಂಬ ಸಂದೇಶದ ಮೂಲಕ ಶ್ರಮದ ಮಹತ್ವ ಸಾರಿದವರು ಬಸವಣ್ಣನವರು. ಜಾತಿ-ಮತ ಭೇದವಿಲ್ಲದೆ ಎಲ್ಲರೂ ಸಮಾನರು ಎಂಬ ಅವರ ಆದರ್ಶಗಳು ಇಂದಿಗೂ ನಮಗೆ ದಾರಿದೀಪ. ನಾವೆಲ್ಲರೂ ಒಗ್ಗಟ್ಟು ಮತ್ತು ಸೌಹಾರ್ದತೆಯಿಂದ ಸಮಾಜ ನಿರ್ಮಿಸೋಣ," ಎಂದು ಕರೆ ನೀಡಿದರು.

ಮತ್ತೊಬ್ಬ ಮುಖಂಡರಾದ ಚಂದ್ರಪ್ಪ ಬುದ್ದಿನ್ನಿ ಮಾತನಾಡಿ "ಜಾತಿ ವ್ಯವಸ್ಥೆಯ ವಿರುದ್ಧ ವಚನ ಸಾಹಿತ್ಯದ ಮೂಲಕ ಕ್ರಾಂತಿ ಮಾಡಿದ ಮಹಾನ್ ಪುರುಷ ಬಸವಣ್ಣ. ಅಸ್ಪೃಶ್ಯ ಸಮಾಜಕ್ಕೆ ದೇವರನ್ನು ಹತ್ತಿರವಾಗಿಸಿದ ನಾಯಕ ಅವರು. ಅವರ ಜಯಂತಿಯಲ್ಲಿ ಊರಿನವರೆಲ್ಲರೂ ಭಾಗವಹಿಸಿರುವುದು ಸಂತೋಷದ ವಿಷಯ," ಎಂದರು. ಸಾರ್ವಜನಿಕರ ಸಹಭಾಗಿತ್ವ ಮೆರವಣಿಗೆಯು ವಾಲ್ಮೀಕಿ ವೃತ್ತದ ಮೂಲಕ ಸಾಗಿ ಪುನಃ ಪ್ಯಾಟಿ ಬಸವಣ್ಣದೇವರ ಗುಡಿಗೆ ಬಂದು ತಲುಪಿತು. ಗ್ರಾಮಸ್ಥರು ಬಸವಣ್ಣನವರ ಮೇಲಿನ ಭಕ್ತಿಯಿಂದ ತಮ್ಮ ಅಂಗಡಿ ಮುಂಗಟ್ಟುಗಳನ್ನು ಸ್ವಯಂಪ್ರೇರಿತವಾಗಿ ಬಂದ್ ಮಾಡಿ, ಉತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಉಪಸ್ಥಿತರಿದ್ದ ಪ್ರಮುಖರು* ಈ ಸಂದರ್ಭದಲ್ಲಿ ಶ್ರೀಮಾನ್ ಗುಂಡು ರಾವ್ ಅಕಬ ಸಾಹೇಬ್ರು ದೇವದುರ್ಗ, ಬಸವರಾಜ್ ದೊಡ್ಡಹಳ್ಳಿ, ಶಿವರಾಜ್ ಪಾಣಿ, ಜಗದೀಶ್ ಪಂಪಾಪತಿ, ಶ್ರೀಧರ್ ದೇಸಾಯಿ, ಅಮರೇಶ್ ಪಾಟೀಲ್, ರಾಮನಗೌಡ ಮಾಲಿಪಾಟೀಲ್,ದೇವರಾಜ್ ನರೇಗಲ್, ವೇಣುಗೋಪಾಲ್ ವಕೀಲರು, ರಂಗನಾಥ್ ಮಕಾಶಿ, ನಂದಪ್ಪ ಪಿ ಮಡ್ಡಿ (ತಾಲೂಕು ಕರವೇ), ತಮ್ಮಣ್ಣ ಹೇರುಂಡಿ (ಹೋಬಳಿ ಅಧ್ಯಕ್ಷರು ಕರವೇ), ಶಾಂತಪ್ಪ ಬಳೆ, ವಿನೋದ್ ಚಿಕಲ್, ಚಂದ್ರಶೇಖರ್ ನಾಡಗೌಡ, ಆನಂದ ಪಾಟೀಲ್, ವೆಂಕೋಬ ತೋಟದ ಶಂಕರಗೌಡ ಪಾಟೀಲ್, ರಂಗಪ್ಪ ಬಂಡಿ, ಲಿಂಗಣ್ಣ ನಾಯಕ್ ಮಕಾಶಿ, ವೀರೇಶ್ ಅರಕೇರಿ (ಗ್ರಾ.ಪಂ. ಉಪಾಧ್ಯಕ್ಷರು), ಅಯ್ಯಪ್ಪ ತಾತ, ಸರ್ಬಣ್ಣ ಹಂಪರಗುಂದಿ, ತಿಮ್ಮಣ್ಣ ನಾಯಕ್ ದಿವಾನ್ ಸೇರಿದಂತೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಹಾಗೂ ಊರಿನ ಸಮಸ್ತ ನಾಗರಿಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಆಶಯ-ಶುಭಾಶಯ.!

ಕನಕ ಮೌಲ್ಯದ
ನುಡಿಗಳಿರಲು
ಸುವರ್ಣ ತೂಕದ
ನಡೆಗಳಿರಲು
ಅಪ್ಪಟ ಬಂಗಾರದ
ಹೃನ್ಮನಗಳಿರಲು...

ಪ್ರತಿದಿನವೂ ಗೆಳೆಯ
ಅಕ್ಷಯತೃತೀಯ
ಪ್ರತಿಕ್ಷಣ ಚಿನ್ನದಾ
ಹೊಳಪು ಹೊಂಬೆಳಕಿಟ್ಟು
ಬೆಳಗಬಲ್ಲೆವು ಇಳೆಯ.!

ಕ್ಷಯವಾಗಲಿ ಬದುಕಿನ
ಸ್ವಾರ್ಥ ದ್ವೇಷಗಳು
ಅಕ್ಷಯವಾಗಲಿ ಬೆಳಕಿನ
ಪ್ರೀತಿ ತ್ಯಾಗಗಳು.!

ನಿತ್ಯ ಜಗ ಬೆಳಗಲಿ
ಸತ್ಯ ಸತ್ವ ತತ್ವಗಳ
ಶ್ರೀಬಸವ ಜ್ಯೋತಿ.!
ಅಡಿಗಡಿಗೂ ಸ್ಫೂರ್ತಿ
ಶಕ್ತಿ ದೀಪ್ತಿಯಾಗಲಿ
ಭಕ್ತಿ ಭಂಡಾರಿಯ ನೀತಿ.!

ಎ.ಎನ್.ರಮೇಶ್. ಗುಬ್ಬಿ

## ಪುರಾಣ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಮಾಗಣಗೇರಿ ಶ್ರೀ ಅಭಿಮತ "ಆಧ್ಯಾತ್ಮಿಕ ಬದುಕಿನಿಂದ ಜೀವನ ಸಾರ್ಥಕ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಧರ್ಮ ಮನುಷ್ಯನನ್ನು ಅಜ್ಞಾನದ ಕತ್ತಲೆಯಿಂದ ಸುಜ್ಞಾನದ ಬೆಳಕಿನೆಡೆಗೆ ತರುತ್ತದೆ ಆಧ್ಯಾತ್ಮಿಕ ಬದುಕಿನಿಂದಲೇ ಮನುಷ್ಯನಿಗೆ ಶಾಂತಿ ನೆಮ್ಮದಿ ಸಿಗಲು ಸಾಧ್ಯ ಎಂದು ಮಾಗಣಗೇರಿಯ ಷ.ಬ್ರ.ಡಾ.ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.**

ತಾಲೂಕಿನ ಸುಕ್ಷೇತ್ರ ಶಳ್ಳಗಿ ಗ್ರಾಮದಲ್ಲಿ ಬಸವಂತರಾಯ ಹಾಗೂ ಪರಮಣ್ಣ ಮುತ್ಯಾರವರ ಜಾತ್ರೋತ್ಸವ ಅಂಗವಾಗಿ ಸೋಮವಾರ ಸಂಜೆ ಹಮ್ಮಿಕೊಂಡ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರರ ಪುರಾಣ ಮಹಾಮಂಗಲೋತ್ಸವ ಹಾಗೂ ಧರ್ಮಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬಿಜೆಪಿ ಮುಖಂಡ ಬಸನಗೌಡ ಪಾಟೀಲ (ಯಡಿಯಾಪೂರ) ಮಾತನಾಡಿ ಪುರಾಣ ಪ್ರವಚನ ಆಲಿಸುವುದ-




ರಿಂದ ಬದುಕು ಪಾವನವಾಗುತ್ತದೆ. ಮಹಾಪುರುಷರ ಸಂತ ಶರಣ-ರ ಬದುಕಿನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ ಎಂದರು.

ಯಾದಗಿರಿ ಜಿಲ್ಲಾ ರೈತ ಹೋರಾಟಗಾರ ಮಲ್ಲನಗೌಡ ಹಗರಟಗಿ ಮಾತನಾಡಿ ದೇಶಕ್ಕೆ ಅನ್ನ ನೀಡುವ ಅನ್ನದಾತನ ಸೇವೆಯನ್ನು ಸದಾ ಸ್ಮರಿಸುವ ಕಾರ್ಯ ಆಗಬೇಕು. ಇವತ್ತು ನಾವೆಲ್ಲರೂ ನಮ್ಮ ಮಕ್ಕಳನ್ನು ಇಂಜಿನಿಯರ್, ವೈದ್ಯರನ್ನಾಗಿ ಮಾಡಲು ಬಯಸುತ್ತೇವೆ ಆದ-'ರೆ ನಾವ್ಯಾರು ಅವರನ್ನು ರೈತನನ್ನಾಗಿ ಮಾಡಲು ಬಯಸುವುದಿಲ್ಲ ಕೃಷಿ ಕ್ಷೇತ್ರಕ್ಕೆ ಮಹತ್ವ ನೀಡುವ ಅಗತ್ಯ ಇದೆ ಎಂದರು. ನಾವದಗಿ ಬ್ರಹನ್ಮಠದ ಷ.ಬ್ರ.ಶ್ರೀ ರಾಜಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಕೆ.ನಾಡಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಿತಿ ಗೌರವಾಧ್ಯಕ್ಷ ಕಾಶಿರಾಯಗೌಡ ದೇಸಾಯಿ, ಸಣಕಪ್ಪ ಮುತ್ಯಾ ಬಂಡೆಪ್ಪನಹಳ್ಳಿ, ಪರಮಣ್ಣ ಶರಣರು, ಮುದಕಪ್ಪ ಪೂಜಾರಿ, ಪಂಚಾಕ್ಷರಿ ಮುತ್ಯಾ ಹಿರೇಮಠ, ಸಾಹೇಬಗೌಡ ಪಾಟೀಲ(ಲಕ್ಕುಂಡಿ), ಸಾಹೇಬಣ್ಣ ಆಲ್ಯಾಳ, ಬಸನಗೌಡ ಬಿರಾದಾರ, ಅಣ್ಣಪ್ಪಗೌಡ ನಾಡಗೌಡ, ಸುರೇಶಬಾಬುಗೌಡ ಬಿರಾದಾರ (ಪೀರಾಪೂರ), ಮಲಕೇಂದ್ರಾಯಗೌಡ ಪಾಟೀಲ, ಪ್ರಶಾಂತಗೌಡ ಪಾಟೀಲ, ಸಂಗನಗೌಡ ಪಾಟೀಲ(ಚಬನೂರ), ಸಿದ್ದನಗೌಡ ಪೋಲೀಸಪಾಟೀಲ(ಕ-ರಿಭಾವಿ), ಬಸವರಾಜ ಗೊರಜಿ, ಸಂಗನಗೌಡ ಹೆಗರೆಡ್ಡಿ, ರಾಯಪ್ಪಗೌಡ ನೀರಲಗಿ,ಶರಣಗೌಡ ಪೋಲಿಸ್ ಪಾಟೀಲ ಮತ್ತಿತರರು ಇದ್ದರು.

## ತೊಗಟವೀರ ಕ್ಷತ್ರಿಯ ಸಮಾಜದಿಂದ ಶ್ರೀ ಚೌಡೇಶ್ವರಿ ದೇವಿಯ ಜ್ಯೋತಿಉತ್ಸವ ಮೆರವಣಿಗೆ



**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜದ ಶ್ರೀ ಚೌಡೇಶ್ವರಿ ದೇವಿಯ 39ನೇಯ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ 3-44 ನಿಮಿಷದ ಧನಸ್ಸು ಲಗ್ನದ ಶುಭಮುರ್ಹತದಲ್ಲಿ ಶ್ರೀ ಚೌಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಸಾಂಪ್ರದಾಯಿಕವಾಗಿ.**

ಅಲಂಕರಿಸಿದ ನೂರಾರು ಜ್ಯೋತಿಗಳನ್ನು ಬೆಳಗಿಸಿಕೊಂಡು ತೊಗಟವೀರ ಕ್ಷತ್ರಿಯ ಸಮಾಜದ ನೂರಾರು ಯುವಕರು ಕೇಸರಿ ವಸ್ತ್ರ ಧರಿಸಿ, ಶರೀರದ ಮೇಲೆ ಧಾರ್ಮಿಕ ಚಿಹ್ನೆಗಳನ್ನು ಧರಿಸಿಕೊಂಡು ಶ್ರದ್ಧೆಯಿಂದ ತಮ್ಮ ತಲೆಯ ಮೇಲೆ ಜ್ಯೋತಿಗಳನ್ನು ಹೊತ್ತು ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದವರೆಗೆ ಜ್ಯೋತಿ ಉತ್ಸವದ ಮೆರವಣಿಗೆ ನಡೆಯಿತು.

ಭಕ್ತರು ತಮ್ಮ ಮನೆಗಳ ಹತ್ತಿರ ಬರುವ ಶ್ರೀ ಚೌಡೇಶ್ವರಿ ದೇವಿಯಜ್ಯೋತಿಗೆ ಭಕ್ತಿಭಾವದಿಂದ ಪೂಜೆ ಸಲ್ಲಿಸಿದರು. ಬೆಳಿಗ್ಗೆ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಆವರಣದಿಂದ ಪ್ರಾರಂಭವಾಗುವ ಜ್ಯೋತಿ ಉತ್ಸವದ ಮೆರವಣಿಗೆ ಪಟ್ಟಣದ ವಿವಿಧ ವಾರ್ಡಗಳಲ್ಲಿ ಸಂಚರಿಸಿ ಭಕ್ತರಿಂದ ಪೂಜೆ ಸ್ವೀಕರಿಸಿ ಮರಳಿ ದೇವಸ್ಥಾನಕ್ಕೆ ಸೇ-ರಿಕೊಂಡವು ಸಾವಿರಾರು ಭಕ್ತರು ಜ್ಯೋತಿ ಉತ್ಸವದಲ್ಲಿ ಭಾಗವಹಿಸಿದರು.

## ಬಿಸಿಲಿನ ಪ್ರಖರತೆಯಲ್ಲಿ ಗರ್ಭಿಣಿ, ಬಾಣಂತಿ, ಚಿಕ್ಕ ಮಕ್ಕಳನ್ನು ಬೀರು ಬಿಸಿಲಿನಲ್ಲಿ ಸುರಕ್ಷತೆಯ ಕಾಳಜಿ ವಹಿಸಿ.

**ನೈಜ್ಯ ದೆಸೆ ನ್ಯೂಸ್**

ಸಿಂಧನೂರು: ಎಲ್ಲಡೆ ಬಿಸಿಲಿನ ಪ್ರಖರತೆ ಇನ್ನು ಅಧಿಕವಾಗುವ ಸಂಭವವಿದ್ದು, ಕುಟುಂಬದಲ್ಲಿ ಗರ್ಭಿಣಿ, ಬಾಣಂತಿ, ಚಿಕ್ಕ ಮಕ್ಕಳು, ವಯೋವೃದ್ದರು, ಧೀರ್ಘಕಾಲಿನ ಔಷಧೋಪಚಾರದಲ್ಲಿರುವವರು ತಮ್ಮ ಆರೋಗ್ಯ ಸುರಕ್ಷತೆಗಾಗಿ ಬೀರು ಬಿಸಿಲಿನಲ್ಲಿ ಸುರಕ್ಷತೆಯನ್ನು ಅನುಸರಿಸಲು ನಿರಂತರವಾಗಿ ಮಾಹಿತಿ ನೀಡಲು ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸೀಮಾ ಅಂಗಡಿ ವಿನಂತಿಸಿಕೊಂಡರು.





ಗಾಂಧಿನಗರದ ಆಸ್ಪತ್ರೆಯ ಆವರಣದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಿ ಮಾತನಾಡುತ್ತಾ, ಮುಖ್ಯವಾಗಿ ಸಂಭ್ರಾಂತಿ, ಸ್ಪಷ್ಟವಿಲ್ಲದ ಮಾತು, ಅರೆಪ್ರಜ್ಞೆ ಶಾಖಾಘಾತದ ಲಕ್ಷಣಗಳಾಗಿದ್ದು ತಕ್ಷಣ ನೇರಳಿರುವ ಜಾಗಕ್ಕೆ ಸ್ಥಳಾಂತರಿಸಿ ಆರೈಕೆ ಮಾಡಿ, ತುರ್ತು ಅಗತ್ಯಬಿದ್ದಲ್ಲಿ 108 ಕ್ಕೆ ಕರೆ ಮಾಡಲು ತಿಳಿಸಿದರು. ಹೆಚ್‌ಪಿವಿ ಲಸಿಕೆ: ಗರ್ಭಕಂಠದ ಕ್ಯಾನ್ಸರ್ ತಡೆಗೆ ಕುಟುಂಬದಲ್ಲಿ 14 ವರ್ಷ ವಯಸ್ಸಿನ ಹೆಣ್ಣು ಮಗಳಿಗೆ ತಪ್ಪದೆ ಹೆಚ್‌ಪಿವಿ ಲಸಿಕೆ ತಪ್ಪದೆ ಹಾಕಿಸಲು, ಹಾಗೂ 100 ದಿನಗಳ ಕ್ಷಯಮುಕ್ತ ಭಾರತ ಅಭಿಯಾನದಡಿ ಆಯ್ದ ಗ್ರಾಮಗಳಲ್ಲಿ ತಪ್ಪದೆ ಕ್ಷಯ ಪರೀಕ್ಷೆ ಮಾಡಿಸಲು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೊಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರೀಯ ಆರೋಗ್ಯ ನೀರಕ್ಷಣಾಣಾಧಿಕಾರಿ ಸಂಗನಗೌಡ ಮಾಲಿ ಪಾಟೀಲ್, ಶೂಶ್ರೂಷಣಾಧಿಕಾರಿ ಸುಜಾತಾ ಅಂಗಡಿ, ಔಷಧಿ ಅಧಿಕಾರಿ ರಾಜೇಶ್, ಎಸ್‌ಟಿ-ಎಸ್ ಯಮನೂರ, ಪಿಹೆಚ್‌ಸಿಓ ಲಕ್ಷ್ಮೀ, ಈರಮ್ಮ, ರೇಣುಕಾ, ಸಾವಿತ್ರಿ, ಇಸ್ಮಾಯಿಲ್ ಬೀ, ಹೆಚ್‌ಐಓ ಪದ್ಮಾವತಿ, ಸಿಹೆಚ್‌ಓ ಶ್ರೀದೇವಿ, ನಿರುಪಾದಮ್ಮ, ಅಯ್ಯನಗೌಡ, ಸುಮಾ ಪಾಟೀಲ್, ಸಂಧ್ಯಾ, ಎಲ್‌ಟಿಓ ಮಹಮ್ಮದ್ ಕೈಫ್, ಮುಂತಾದವರು ಉಪಾಸ್ಥಿತರಿದ್ದರು.

## ಡಾ.ರಾಜಕುಮಾರ್ ಜಯಂತಿ ಅರ್ಥಪೂರ್ಣ ಆಚರಣೆ: ಎಡಿಸಿ ಶಿವಾನಂದ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನಟ ಸಾರ್ವಭೌಮ, ವರನಟ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವು ಇದೇ ಏ.24 ರಂದು ಅರ್ಥಪೂರ್ಣವಾಗಿ ಆಚ-ರಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಹೇಳಿದರು.**

ಏಪ್ರಿಲ್ 24ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಾ.ರಾಜಕುಮಾರ ಜಯಂತಿ ಅರ್ಥಪೂರ್ಣವಾಗಿ ಆಚರಿಸುವ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಅವರು ಮಾತನಾಡಿದರು.




ಡಾ. ರಾಜಕುಮಾರ್ ಅಭಿಮಾನಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ವಿಶೇಷ ಉಪನ್ಯಾಸಕರನ್ನು ಕರೆಸಿ ಡಾ. ರಾಜಕುಮಾರ ಅವರ ಜೀವನ ಹಾಗೂ ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡುವಂತಾಗಬೇಕು. ಪ್ರತಿ ವರ್ಷದಂತೆ ಈ ವರ್ಷ ರಾಯಚೂರು ನಗರದ ಕನ್ನಡ ಭವನದಲ್ಲಿ ಏಪ್ರಿಲ್ 24ರ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜನೆ ಮಾಡಬೇಕು ಎಂದರು.

ಅಂದು ಬೆಳಿಗ್ಗೆ ಡಾ. ರಾಜಕುಮಾರ ಅವರ ಭಾವಚಿತ್ರಕ್ಕೆ ಪುಷ್ಪ ನಮನ, ಅವರ ಚಲನಚಿತ್ರ ಗೀತೆಗಳ ಗಾಯನ, ಡಾ. ರಾಜ-ಕುಮಾರ ಕುರಿತು ಇತರೆ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಸೇರಿದಂತೆ ಇತರೆ ಡಾ.ರಾಜ-ಕುಮಾರ ಅಭಿಮಾನಿ ಬಳಗ, ಕಲಾ ತಂಡಗಳ ಸಹಯೊಗದೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ರಾಯಚೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಸುರೇಶ ಜಿ, ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ಎ.ಪ್ರಕಾಶ್, ರಮೇಶ ಗೌಡೂರು ಜಾಲಹಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಆಚರಣೆ



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ಶ್ರೀ ನಿಮಿಷಾಂಭಾ ದೇವಿ ದೇವಸ್ಥಾನದ ಮುಂಭಾಗದಲ್ಲಿ ಸೋಮವಂಶ** ಆರ್ಯ ಕ್ಷತ್ರಿಯ ಸಮಾಜದ ವತಿಯಿಂದ ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರ ಜಯಂತಿಯನ್ನು ಮಂಗಳವಾರ ಅಥ-'ರ್ಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಅಧ್ಯಕ್ಷ ಭೀಮರಾವ್ ಕುಲಕರ್ಣಿ ಮಾತನಾಡಿ ಪರಮೇಶ್ವರನ ಅವತಾರಿಗಳಾದ ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರ ಅವಿರತ ಪ್ರಯತ್ನದಿಂದಾಗಿ ಸನಾತನ ಹಿಂದೂ ಧರ್ಮವೂ ಜೀವಂತವಾಗಿರಲು ಸಾಧ್ಯವಾಗಿದೆ. ಜಗದ್ಗುರು ಶಂಕರಾಚಾರ್ಯರ ದೃಷ್ಟಿ ಲೋಕಕಲ್ಯಾಣವಾಗಿತ್ತು ಶ್ರೀ ಗೋವಿಂದ ಭಗವತ್ಪಾದರಿಂದ ಅನುಗ್ರಹಿತರಾಗಿ ಅವರ ಆದೇಶದಂತೆ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದರು. ಭಾರತದ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿ ಉತ್ತರದಲ್ಲಿ ಬದರಿ ಪಶ್ಚಿಮದಲ್ಲಿ ದ್ವಾರಕಿ ಪೂರ್ವದಲ್ಲಿ ಪುರಿ ಹಾಗೂ ದಕ್ಷಿಣದಲ್ಲಿ ಶೃಂಗೇರಿ ಹೀಗೆ ನಾಲ್ಕು ಪೀಠಗಳನ್ನು ಸ್ಥಾಪಿಸಿದರು.

ಅವರು ಸನಾತನ ಹಿಂದೂ ಧರ್ಮದ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ ಎಂದು ತಿಳಿಸಿದರು. ಈ ಸಮಯದಲ್ಲಿ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ಅಧ್ಯಕ್ಷ ಘನಶ್ಯಾಮ ಚೌವ್ಹಾಣ,ರಾಘವೇಂದ್ರ ಚೌವ್ಹಾಣ, ಪುರಸಭೆ ಮಾಜಿ ಸದಸ್ಯ ಮುದಕಪ್ಪ ಬಡಿಗೇರ, ಗಣಪತಿ ಚೌವಾಣ, ರಮೇಶ ಚೌವ್ಹಾಣ, ದೊಂಡಿರಾಮ ಮಿರಜಕರ, ಸಚಿನ್ ಭೂಸಾರೆ, ಶಂಕರ ಉಬಾಳೆ, ಗೋವಿಂದ ಚೌಧ್ರಿ, ರಾಘವೇಂದ್ರ ಮಿರಜಕರ್, ಕಾಶಿನಾಥ ಚಿತಾಪೂರ, ನಾಗೇಶ ಚೌವ್ಹಾಣ, ತುಳಸಿರಾಮ ಚೌವ್ಹಾಣ, ಅಶೋಕ ಶೆಟ್ಟಿ, ಮಹೇಶ ಕರ್ಜಗಾರ, ಸಂದೀಪ್ ಚೌವ್ಹಾಣ, ಆಕಾಶ ಪಿಂಪಳೆ, ಪ್ರದೀಪ ಭೂಸಾರೆ ಮತ್ತಿತರರು ಇದ್ದರು.


## ಜಿಲ್ಲಾಡಳಿತದಿಂದ ಏಪ್ರಿಲ್ 23ರಂದು ಶ್ರೀ ಭಗೀರಥ ಜಯಂತಿ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಏಪ್ರಿಲ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.**

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ. ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ,

ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ




ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್,

ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಪಾಗುಂಟಪ್ಪ ಮಿರ್ಜಾಪುರ, ಜಿಲ್ಲಾಧಿಕಾ-ರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಬಾಗಲಕೋಟೆಯ ಉಪನ್ಯಾಸಕರು ಹಾಗೂ ಯೋಗ ಶಿಕ್ಷಕರಾದ ರಾಘವೇಂದ್ರ ನೀಲನ್ನವರ ಅವರು ಶ್ರೀ ಭಗೀರಥ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ ನೇಮಕಾತಿ 2026–1000 ಜನಗಣತಿದಾರರು/ ಜನಗಣತಿ ಎಣಿಕೆದಾರರು ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ ಏಪ್ರಿಲ್ 21, 2026 ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ ನೇಮಕಾತಿ 2026: 1000 ಜನಗಣತಿದಾರರು/ ಜನಗಣತಿ ಎಣಿಕೆದಾರರು ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ಮೂಲಕ ಜನಗಣತಿ ತೆಗೆದುಕೊಳ್ಳುವವರು/ ಜನಗಣತಿ ಎಣಿಕೆದಾರರು ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22–ಏಪ್ರಿಲ್–2026 ರಂದು ವಾಕ್–ಇನ್–ಸಂದರ್ಶನಕ್ಕೆ ಹಾಜರಾಗಬಹುದು ಮತ್ತು ಗಣತಿಯ ಮೊದಲ ಹಂತದ ಕೊನೆಯ ದಿನಾಂಕ 15–05–2026 ರವರೆಗೆ ಇರುತ್ತದೆ.ಅಧಿಸೂಚನೆ ಬಿಡುಗಡೆ ದಿನಾಂಕ: 20–04–2026 ವಾಕ್–ಇನ್ ಸಂದರ್ಶನ ದಿನಾಂಕ: 22–ಏಪ್ರಿಲ್–2026 ಮೊದಲ ಹಂತದ ಗಣತಿ ಕಾರ್ಯದ ಕೊನೆಯ ದಿನಾಂಕ: 15–05–2026 ಅಧಿಕೃತ ವೆಬ್‌ಸೈಟ್: bbmp.gov.in

## ನೆಲೆ ಇಲ್ಲದ ಈರಪ್ಪನಿಗೆ ಆಸರೆಯಾದ ಕಾರುಣ್ಯಾಶ್ರಮದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಗಂಗಾವತಿ ತಾಲೂಕಿನ ಹೊಸಕೆರೆ ಕ್ಯಾಂಪ್ ನಲ್ಲಿ ಕುಟುಂಬವಿಲ್ಲದೆ ಜನರ ಸಹಾಯ ಸಹಕಾರದೊಂದಿಗೆ ಬದುಕು ನಡೆಸುತ್ತಿದ್ದ ಕಾಲಿನ ತೊಂದರೆಗೊಳಗಾಗಿದ್ದ ಸಂಬಂಧಿಗಳು ಯಾರು ಇಲ್ಲದ ಈರಪ್ಪ ವಯಸ್ಸು–54 ಇವರನ್ನು ಅಲ್ಲಿಯ ಸ್ಥಳೀಯರಾದ ವೆಂಕಟ ದುರ್ಗಾ ಅವರು ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರಿಗೆ ಈತನ ಬದುಕಿನ ಬಗ್ಗೆ ಮಾಹಿತಿ ನೀಡಿದ್ದರು.**

ಈತನ ಬದುಕಿನ ಸ್ಥಿತಿಯನ್ನು ಅರಿತುಕೊಂಡ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಅವರು ಈತನನ್ನು ಆಶ್ರಮಕ್ಕೆ ಕರೆತಂದು ಆಶ್ರಯ ಕೊಟ್ಟು ಆಸರೆಯಾದರು. ಈ ಸಮಯದಲ್ಲಿ ಅವರು




ಪತ್ರಿಕಾ ಮಾಧ್ಯಮದೊಂದಿಗೆ ಮಾತನಾಡಿ ನೆಲೆ ಇಲ್ಲದ ಜೀವಿಗಳಿಗೆ ನೆಲೆ ಕಲ್ಪಿಸುವುದೇ ಕಾರುಣ್ಯ ಕುಟುಂಬದ ಮೂಲ ಉದ್ದೇಶವಾಗಿದೆ. ಮಾನವ ಧರ್ಮದಲ್ಲಿ ಹುಟ್ಟಿದ ನಾವೆಲ್ಲರೂ ಮಾನವೀಯತೆಯಿಂದ ದೂರ ಉಳಿಯದೆ ಅದನ್ನು ಉಳಿಸಬೇಕಾದ ಅನಿವಾರ್ಯತೆ ಈಗಿನ ಕಾಲದಲ್ಲಿದೆ. ನಿತ್ಯ ನಿರಂತರ ಕಾರುಣ್ಯ ಕುಟುಂಬದ ಬದುಕಿಗೆ ದಾನಿಗಳು ಸಹಾಯ ಸಹಕಾರ ಮಾಡುತ್ತಿರುವುದ–ರಿಂದ ಇಂತಹ ಕಾರ್ಯಗಳು ನೆರವೇರುತ್ತೀವೆ.

ಸಮಾಜದ ಅನೇಕ ಹಲವಾರು ಟಿ.ಕೆ. ಟಿಪ್ಪಣಿ ಅವಮಾನ ಅಪಪ್ರಚಾರಗಳೇ ನಮ್ಮ ಸೇವೆಗೆ ಸ್ಫೂರ್ತಿಯಾಗಿವೆ. ಇಂದು ನಾವು ಆಶ್ರಯ ನೀಡಿದ ಈರಪ್ಪನಿಗೆ ಆಯಸ್ಸು ಆಯುರಾರೋಗ್ಯ ತಮ್ಮೆಲ್ಲರ ಆಶೀರ್ವಾದವಿರಲಿ ಎಂದು ಭಾವನಾತ್ಮಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಆಶ್ರಮದ ಸಲಹಾ ಸಮಿತಿಯ ಸದಸ್ಯರುಗಳಾದ ಬೀರಪ್ಪ ಯಲಗಲದಿನ್ನಿ. ಶರಣಬಸವ ನಾಯಕ ಕಸಬಾ ಲಿಂಗಸೂಗೂರು. ಮಹೇಶ ಬಾರಕೇರ. ಮೌನೇಶ ಕಸಬಾ ಲಿಂಗಸೂಗೂರು ಹಾಗೂ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮರದ ಗುಡ್ಡ.ಸಿದ್ದಯ್ಯ ಸ್ವಾಮಿ. ಜ್ಯೋತಿ.ಮೀನಾಕ್ಷಮ್ಮ.ಲಕ್ಷ್ಮಿ. ಇವರುಗಳು ಉಪಸ್ಥಿತರಿದ್ದರು.

## ಹೆರಿಗೆ ವೇಳೆ ದುರಂತ: ಲೋಕಾಪುರ ಮಹಿಳಾ ಪೊಲೀಸ್ ಕಾನ್ಸ್ಟೇಬಲ್ ಹಾಗೂ ಮಗು ಸಾವು

ನೈಜ್ಯ ದೆಸೆ ನ್ಯೂಸ್

**ಮುಧೋಳ: ಬಾಗಲಕೋಟೆ: ಜಿಲ್ಲೆಯ ಮುಧೋಳ ತಾಲೂಕಿನ ಲೋಕಾಪುರ ಪಟ್ಟಣದಲ್ಲಿ ಹೆರಿಗೆ ವೇಳೆ ಸಂಭವಿಸಿದ ದುರಂತದಲ್ಲಿ ಮಹಿಳಾ ಪೊಲೀಸ್ ಕಾನ್ಸ್ಟೇಬಲ್ ಹಾಗೂ ನವಜಾತ ಶಿಶು ಮೃತಪಟ್ಟಿರುವ ಘಟನೆ ಸಾರ್ವಜನಿಕರಲ್ಲಿ ದುಃಖದ ವಾತಾವರಣ ನಿರ್ಮಿಸಿದೆ. ಲಭ್ಯ ಮಾಹಿತಿಯಂತೆ, ಗರ್ಭಿಣಿಯಾಗಿದ್ದ ಮಹಿಳಾ ಪೊಲೀಸ್ ಕಾನ್ಸ್ಟೇಬಲ್ ಅವರನ್ನು ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.**

ಹೆರಿಗೆ ಪ್ರಕ್ರಿಯೆ ನಡೆಯುವ ವೇಳೆ



ಅಚಾನಕ್ ರಕ್ತದೊತ್ತಡ ತೀವ್ರವಾಗಿ ಕುಸಿದ ಪರಿಣಾಮ ಆರೋಗ್ಯ ಸ್ಥಿತಿ ಗಂಭೀರಗೊಂಡಿದ್ದು, ವೈದ್ಯರು ತೀವ್ರ ಪ್ರಯತ್ನ ನಡೆಸಿದರೂ ತಾಯಿ ಹಾಗೂ ಮಗು ಇಬ್ಬರನ್ನೂ ಉಳಿಸಲು ಸಾಧ್ಯವಾಗಲಿಲ್ಲ ಎಂದು ತಿಳಿದುಬಂದಿದೆ. ಕರ್ತವ್ಯನಿಷ್ಠ ಹಾಗೂ ಜನಸ್ನೇಹಿ ಪೊಲೀಸ್ ಸಿಬ್ಬಂದಿಯಾಗಿ ಗುರುತಿಸಿಕೊಂಡಿದ್ದ ಅವರು ಸಹೋದ್ಯೋಗಿಗಳ ಹಾಗೂ ಸ್ಥಳೀಯರ ಗೌರವಕ್ಕೆ ಪಾತ್ರರಾಗಿದ್ದರು. ಅವರ ಅಕಾಲಿಕ ನಿಧನ ಸುದ್ದಿ ತಿಳಿದ ತಕ್ಷಣ ಪೊಲೀಸ್ ಇಲಾಖೆ ಅಧಿಕಾರಿಗಳು, ಸಹೋದ್ಯೋಗಿಗಳು ಹಾಗೂ ಸಾರ್ವಜನಿಕರು ಆಸ್ಪತ್ರೆಗೆ ಆಗಮಿಸಿ ಶೋಕ ವ್ಯಕ್ತಪಡಿಸಿದರು.

ಕರ್ನಾಟಕ ಪೊಲೀಸ್ ಇಲಾಖೆಯಿಂದ ಪೊಲೀಸ್ ಗೌರವದೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಪೊಲೀಸ್ ಬ್ಯಾಂಡ್ ನಾದದ ನಡುವೆ ಗೌರವ ನಮನ ಸಲ್ಲಿಸಲಾಯಿತು. ಅಧಿಕಾ–ರಿಗಳು, ಜನಪ್ರತಿನಿಧಿಗಳು, ಸ್ನೇಹಿತರು ಹಾಗೂ ಸಾರ್ವಜನಿಕರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ಘಟನೆ ತಾಯಿ–ಮಗು ಆರೋಗ್ಯದ ಮಹತ್ವವನ್ನು ಮತ್ತೊಮ್ಮೆ ಮನದಟ್ಟು ಮಾಡಿಸಿದ್ದು, ಪ್ರದೇಶದ ಜನರಲ್ಲಿ ಆಳವಾದ ದುಃಖದ ಛಾಯೆ ಮೂಡಿಸಿದೆ.

## ಕುರುಕುಂದದಲ್ಲಿ ಭಕ್ತಿಯಿಂದ ಅದ್ದೂರಿಯಾಗಿ ನೆರವೇರಿದ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಕುರುಕುಂದ ಗ್ರಾಮದಲ್ಲಿ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಸೋಮವಾರ ಬಸವ ಜಯಂತಿ ದಿನದಂದು ಸಾಯಂಕಾಲ 6:30 ರಿಂದ ಸಂಜೆ 7:30 ರವರೆಗೆ ಮೂರನೇ ಮೈಲ್ ಕ್ಯಾಂಪಿನ ಸೋಮನಾಥ ಶಿವಾಚಾರ್ಯರು, ಹಾಗೂ ಗಲಗಿನ ಅಯ್ಯಣ್ಣ ತಾತ ಇವರ ನೇತೃತ್ವದಲ್ಲಿ ಹಾಗೂ ದೇವಸ್ಥಾನದ ಕಮಿಟಿ ಸದಸ್ಯರ ಮುಖ್ಯಸ್ಥಿಕೆಯಲ್ಲಿ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಭಕ್ತಿ–ಭಾವದಿಂದ ನೆರವೇರಿತು.**



ಇದಕ್ಕೂ ಮುನ್ನ ಏ.16 ರಂದು ಮಧ್ಯಾಹ್ನ 3:30 ರಿಂದ ಸಂಜೆ 5:30 ರವರೆಗೆ ಡೊಳ್ಳು, ಭಜನೆ, ಭಾಜ–ಭಜಂತ್ರಿ ಹಾಗೂ ಕಳಸ ಕುಂಭದೊಂದಿಗೆ ಗ್ರಾಮದ ಪ್ರಮುಖ ಓಣಿಯಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಿ ಪುರ ಪ್ರವೇಶ ಮಾಡಲಾಗಿ–ತ್ತು. ಭಕ್ತಿಯ ಕಾರ್ಯಕ್ರಮದಲ್ಲಿ ಕುರುಕುಂದ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಪಾಲ್ಗೊಂಡು ತನು ಮನ ಧನದಿಂದ ಸೇವೆ ಸಲ್ಲಿಸಿ ಶ್ರೀ ಅಂಬಾದೇವಿ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ: ಶೇಖರಯ್ಯಸ್ವಾಮಿ ಹಿರೇಮಠ, ಪಟ್ಟದ ಪೂಜಾರಿ, ಶರಣಪ್ಪ ಬಾಗಲವಾಡ, ಜಿಲ್ಲಾ ಪಂಚಾಯತಿ ಸದಸ್ಯ ಭೀಮಣ್ಣ, ಗ್ರಾ.ಪಂ.ಅಧ್ಯಕ್ಷ ಹುಲ್ಲೇಶ, ಸದಸ್ಯ ಗುಡೂರಪ್ಪ, ಹುಲುಗಪ್ಪ ಎಪಿಎಂಸಿ, ಯಂಕಪ್ಪ ಜಲ್ಲಿ, ದುರುಗಪ್ಪ ಬೊಂಬಾಯಿ, ವೀರೇಶ ಕುರುಕುಂದ, ಬಸವರಾಜ, ದೊಡ್ಡಮೌನೇಶ, ಲಕ್ಷ್ಮಣ ಬೊಂಬಾಯಿ, ದುರುಗಪ್ಪ ಶೇಷಗಿರಿ, ಮಹೇಶ ಹಲಗಿ, ಶ್ಯಾಮಣ್ಣ ಭೋವಿ, ವಾಸಪ್ಪ, ಲಕ್ಷ್ಮಮ್ಮ, ನಾಗಮ್ಮ, ಜಾನಮ್ಮ, ಮಹಾಂಕಾಳೆಮ್ಮ, ಲಚಮಮ್ಮ, ಸೇರಿದಂತೆ ನೂರಾರು ಭಕ್ತಾಧಿಗಳು ಭಾಗವಹಿಸಿದ್ದರು.

## ತುರವಿಹಾಳ್ ಸಮೀಪ ಹೊಸ ಕೆರೆ ನಿರ್ಮಾಣ ಕಾಮಗಾರಿ ಪರಿಶೀಲನೆ ಸಿಂಧನೂರು ನಗರ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಗುರಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ನಗರದ ಜನತೆಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಚುರುಕು ನೀಡುವ ಉದ್ದೇಶದಿಂದ ತುರವಿಹಾಳ್ ಗ್ರಾಮದ ಹತ್ತಿರ ನಿರ್ಮಾಣವಾಗುತ್ತಿರುವ ಹೊಸ ಕೆರೆಯ ಕಾಮಗಾರಿ ಸ್ಥಳಕ್ಕೆ ಶಾಸಕ ಹಂಪನಗೌಡ ಬಾದರ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.**

ಎಸ್‌ಎಫ್‌ಸಿ ಹಾಗೂ ಕೆಕೆಆರ್‌ಡಿಬಿ ವತಿಯಿಂದ ಒಟ್ಟು 20 ಕೋಟಿ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ ಯೋಜನೆಯು ನಗರದ ಭವಿಷ್ಯದ ನೀರಿನ ಅವಶ್ಯಕತೆಯನ್ನು ಮನಗಂಡು ರೂಪಿಸಲಾಗಿದೆ. ಕಾಮಗಾರಿ ಸ್ಥಳದಲ್ಲಿ ಅಧಿಕಾರಿಗಳಿಂದ ಯೋಜನೆಯ ಪ್ರಗತಿ, ತಾಂತ್ರಿಕ ವಿವರಗಳು ಹಾಗೂ ಮುಂದಿನ ಹಂತಗಳ ಕುರಿತು ಮಾಹಿತಿ ಪಡೆಯಲಾಯಿತು.




ಈ ಸಂದರ್ಭದಲ್ಲಿ ಕಾಮಗಾರಿ ಯಾವುದೇ ವಿಳಂಬವಿಲ್ಲದೆ ತುರ್ತು ಗತಿಯಲ್ಲಿ ಪೂರ್ಣಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ಅಧಿಕಾರಿಗಳಿಗೆ ನೀಡಲಾಯಿತು.



ಸಿಂಧನೂರು ನಗರದಲ್ಲಿ ವರ್ಷಗಳಿಂದ ಎದುರಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ದಿಸೆಯಲ್ಲಿ ಈ ಯೋಜನೆ ಪ್ರಮುಖ ಮೈಲಿಗಲ್ಲಾಗಲಿದೆ ಎಂದು ತಿಳಿಸಲಾಯಿತು. ಜನಸಾಮಾನ್ಯರ ಮೂಲಭೂತ ಅಗತ್ಯಗಳಾದ ನೀರು, ಆರೋಗ್ಯ ಮತ್ತು ಅಭಿವೃದ್ಧಿಗೆ ಆದ–ƒತೆ ನೀಡುವ ದೃಷ್ಟಿಯಿಂದ ಇಂತಹ ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಜಾ–ರಿಗೆ ತರಲಾಗುತ್ತಿದೆ ಎಂದು ಹೇಳಿದರು.

## ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಪ್ರತಿಪಾದಕರು: ಮನೋಜ್ ಕುಮಾರ್ ಬಾಪಟ್ಲ




ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶಂಕರಾಚಾರ್ಯರು ಎಂಟು ವರ್ಷದವರಿವಾಗಲೇ ನಾಲ್ಕು ವೇದಗಳನ್ನು 11ನೇ ವಯಸ್ಸಿಗೆ ಸರ್ವ ಶಾಸ್ತ್ರಗಳನ್ನು ಕಲಿತು, 16ನೇ ವಯಸ್ಸಿಗೆ ಬರುವಷ್ಟರಲ್ಲಿ ಭಾಷ್ಯಗಳನ್ನು ಬರೆದರು. ಅವರು ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದರು ಎಂದು ಉಪನ್ಯಾಸಕ ಮನೋಜ್ ಕುಮಾರ್ ಬಾಪಟ್ಲ ಹೇಳಿದರು.**

ಅವರು ಮಂಗಳವಾರ ತಹಶೀಲ್ದಾರ್ ಕಚೇರಿಯಲ್ಲಿ ಆದಿಗುರು ಶಂಕರಾಚಾರ್ಯರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಗತ್ತಿನಲ್ಲಿ ಧರ್ಮದ ಪುನರ್ ಸ್ಥಾಪನೆಗಾಗಿ ಆಗಾಗ ಮಹಾತ್ಮರು ಜನಿಸಿದ್ದು ಐತಿಹಾಸಿಕ ಸತ್ಯ. ಅಂತಹ ಮಹಾತ್ಮರ ಸಾಲಿನಲ್ಲಿ ಶಂಕರಾಚಾರ್ಯರು ಒಬ್ಬರು. ಅವರು ದೇವರಲ್ಲಿ ನಂಬಿಕೆ ಇಡಿ, ಸಜ್ಜನರ ಸಹವಾಸ ಮಾಡಿ, ದೀನ–ದಲಿತರಿಗೆ ಸಹಾಯ ಮಾಡಿ, ಇದ್ದುದರಲ್ಲಿ ತೃಪ್ತ ಹಾಗೂ ಸರಳ ಜೀವನ ನಡೆಸಲು ಸದಾ ಉಪದೇಶಿಸುತ್ತಿದ್ದರು ಎಂದು ವಿವರಿಸಿದರು.

ಶಾಸಕ ಹಂಪನಗೌಡ ಬಾದರ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು. ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವೈ. ಅನಿಲಕುಮಾರ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ.ಗೋವಿಂದರಾವ್, ಕಾರ್ಯದರ್ಶಿ ಆನಂದ ಗೌರ್ಕರ್, ಮುಖಂಡರಾದ ನರಸಿಂಹ ಆಚಾರ್ಯ ಮಠಾಧಿಕಾರಿ, ಈರೇಶ ಇಲ್ಲೂರು, ಎಚ್. ಎನ್.ಬಡಿಗೇರ್, ವೆಂಕಟರಾವ್ ಬಂಡಿ, ಗುಂಡುರಾವ್ ಚನ್ನಳ್ಳಿ, ನಾರಾಯಣರಾವ್ ದೇಸಾಯಿ, ಭೀಮಸೇನ ಜಾಗೀರ್ದಾರ್, ಅವಿನಾಶ ಬಂಡಿ ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಬಸವಣ್ಣನವರ ಆರಾಧ್ಯ ದೈವ, ಮನೆದೇವ್ರು ಯಾದಗಿರಿ ಜಿಲ್ಲೆಯ ವಡಗೇರಿಯ ಸಂಗಮದ ಸಂಗಮನಾಥ: ವೈಜನಾಥ ಹಿರೇಮಠ

ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಬಸವಣ್ಣನವರು ಅನೇಕ ಕ್ರಾಂತಿಕಾರಕ ಹೆಜ್ಜೆಗಳನ್ನು ಇರಿಸಿದ ಪ್ರಯುಕ್ತ ಕಲ್ಯಾಣದಲ್ಲಿ 12ನೇ ಶತಮಾನದಲ್ಲಿ ವಚನಗಳ ಕ್ರಾಂತಿಯಾಯಿತು, ಅಂ–ದೇ ಸರ್ವೋತ್ತಮ ಸಮಾಜದ ಸಂಸತ್ತು ಅನುಭವ ಮಂಟಪ ರಚನೆ ಮಾಡಿದ ಕ್ರಾಂತಿಯಾಯಿತು. ಕೊನೆಗೆ ಮಾನವರೆಲ್ಲ ಒಂದೇ ಎಂಬ ಸಂದೇಶ ಸಾರುವ ಕಲ್ಯಾಣ ಕ್ರಾಂತಿಯಾಯಿತು ಎಂದು ಯಾದಗಿರಿ ಟೈಮ್ಸ್ ಸಂಪಾದಕ ವೈಜನಾಥ ಹಿರೇಮಠ ಅಭಿಪ್ರಾಯಪಟ್ಟರು.**

ಅವರು ಇಲ್ಲಿಗೆ ಸಮೀಪದ ನೆರೆಯ ತೆಲಂಗಾಣ ರಾಜ್ಯದ ನಾರಾಯಣಪೇಟೆ ಜಿಲ್ಲೆಯ ಮಖ್ತಲ್ ತಾಲ್ಲೂಕಿನ ಮಾಗನೂರು ಮಂಡಲದ ವ್ಯಾಪ್ತಿಗೆ ಬರುವ ಉಜ್ಜೇಲಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಸತ್ಯ, ನ್ಯಾಯ, ಧರ್ಮ ಮಾರ್ಗದಲ್ಲಿ ಕಾಯಕ ಮಾಡಬೇಕು ಅಂದಾಗ ಮಾತ್ರ ಅಂತಹ ಕಾಯಕವೇ



ಕೈಲಾಸವಾಗಿದೆ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ಕನ್ನಡ ನಾಡಿನ ಏಕೈಕ ಮೇರು ಸಾದೃಶ್ಯ ವ್ಯಕ್ತಿಯಾಗಿರುವ ಬಸವಣ್ಣನವರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಮಹಿಳಾ ಸಮಾನತೆ ಮತ್ತು ಧಾರ್ಮಿಕ–ಸಾಮಾಜಿಕ ಚಿಂತನೆಯ ಸಂಸತ್ತು (ಅನುಭವ ಮಂಟಪ) ಸ್ಥಾಪನೆ ಸೇರಿದಂತೆ ಇಂತಹ ಸಾಧನೆ ಮಾಡಿದ ವಿಶ್ವದ ಏಕೈಕ ವ್ಯಕ್ತಿಯಾಗಿದ್ದಾರೆ ಇಂಥವರ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಡಬೇಕಾಗಿ–ತ್ತು. ಆದರೆ ದುರದೃಷ್ಟವಶಾತ್ ಇವರ ಹೆಸರನ್ನು ಒಂದು ವಿವಿಗೆ ಇಡಲು ಬಿಡದಂತಹ ಕ್ಷುಲ್ಲಕ ಜನತೆ ನಮ್ಮ ರಾಜ್ಯದಲ್ಲಿಯೇ ಇರುವುದು ನೋವಿನ ಸಂಗತಿ ಎಂದರು.

ಬಸವಣ್ಣನವರು ಬಾಲ್ಯದಲ್ಲಿ ಶಿಕ್ಷಣ ಪಡೆದಿದ್ದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಅಲ್ಲ ಬದಲಿಗೆ ಯಾದಗಿರಿ ಜಿಲ್ಲೆ ವಡಗೇರಿ ತಾಲ್ಲೂಕಿನ ಸಂಗಮದಲ್ಲಿ ಎಂಬ ಸಂಗತಿ ಇತ್ತಿಚೆಗಷ್ಟೇ ಬೆಳಕಿಗೆ ಬಂದಿದ್ದು, ಇದನ್ನು ಸ್ವತಃ ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ ತುಮಕೂರಿನ ಶ್ರೀ ಸಿದ್ದಗಂಗಾ ಶಿವಕುಮಾರ ಶ್ರೀಗಳು ತಾಮ್ರಪಟದಲ್ಲಿ ಬರೆದಿಟ್ಟಿದ್ದಾರೆ ಎಂದು ಇತಿಹಾಸಕಾರರು ಉಲ್ಲೇಖಿಸಿದ್ದನ್ನು ತಿಳಿಸುತ್ತಿರುವೆ ಎಂದು ಅವರು ಹೇಳಿದರು. ಬಸವಣ್ಣನವರು ಬಾಲ್ಯ, ಶಿಕ್ಷಣ ಪಡೆದ ಸ್ಥಳ ವಡಗೇರಿ ತಾಲ್ಲೂಕಿನ ಕೂಡಲ ಸಂಗಮವೇ ಆಗಿದೆ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಕೇವಲ ಅವರು ಲಿಂಗೈಕ್ಯವಾದ ಸ್ಥಳವಾಗಿದೆ ಆದರೆ ಆ ಸ್ಥಳಕ್ಕೆ ಹೆಚ್ಚು ಪ್ರಚಾರ ಸಿಕ್ಕಿ ಅದನ್ನೇ ಸತ್ಯ ಎಂದು ನಂಬಿದ ಕಾರಣ ನಮ್ಮ ಜಿಲ್ಲೆಯ ಕೂಡಲ ಸಂಗಮಕ್ಕೆ ಪ್ರಾತಿನಿಧ್ಯ ಸಿಗದಂತಾಯಿತು. ಸಂಶೋಧಕರು ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಶೋಧ ಮಾಡಬೇಕಿದೆ ಎಂದು ನುಡಿದರು.

ಮರಿಕಲ್ ಪಟ್ಟಣದ ನಿವೃತ್ತ ಶಿಕ್ಷಕ ವೆಂಕಟರಾಮುಲು ಮಾತನಾಡಿ ಜಗಜ್ಯೋತಿ ಬಸವಣ್ಣನವರು ಉಪನಯನ ಸಂಸ್ಕಾರದ ಘಟನೆಯಿಂದಲೇ ಕ್ರಾಂತಿಕಾರಕ ನಿಲುವು ಕೈಗೊಂಡು ಮುಂದೆ ಜಗತ್ತಿಗೆ ಮಾದರಿಯಾಗುವಂತಹ ಅನುಭವ ಮಂಟಪವೆಂಬ ಮಾದರಿ ಸಂಸತ್ತು ರಚನೆ ಮಾಡಿದ ಶ್ರೇಷ್ಠ ಚಿಂತಕ ಎಂದು ಅವರು ಹೇಳಿದರು. ತೆಲುಗಿನ ಖ್ಯಾತ ಕವಿಗಳಾದ ಕಂದುಕುರಿ ವೀರೇಶಲಿಂಗಂ, ಕುರಿಜಾಡ ಅಪ್ಪಾರಾವು, ಸುಂದರೇಶ್, ಹೇಮರಡ್ಡಿ ಮಲ್ಲಮ್ಮನ ಮೈದುನ ಯೋಗಿ ವೇಮನರ ಮೇಲೆ ಬಸವಣ್ಣನವರ ಪ್ರಭಾವವು ಆಗಿದ್ದು ಇವರೆಲ್ಲರ ಸಾಹಿತ್ಯದಲ್ಲಿಯೂ ಬಸವಣ್ಣನವರ ವಚನಗಳು ಢಾಳಾಗಿ ಪ್ರತಿಬಿಂಬಿಸಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾಜಿ ಮಂಡಲ ಪಂಚಾಯಿತಿ ಅಧ್ಯಕ್ಷ (ಎಕ್ಸ್ ಎಂಪಿಪಿ) ಶ್ರೀನಿವಾಸರೆಡ್ಡಿ, ಗ್ರಾಮದ ಮುಖಂಡರಾದ ಚಂದ್ರಾರೆಡ್ಡಿ, ಉಪ ಸರ್ಪಂಚ್ (ಗ್ರಾಪಂ ಉಪಾಧ್ಯಕ್ಷ) ಎಂ ರಾಜು, ಗ್ರಾಮಸ್ಥರಾದ ಯಂಕಪ್ಪ, ಗ್ರಾಮ ಕಾಂಗ್ರೆಸ್ ಅಧ್ಯಕ್ಷ ಮೋನಪ್ಪ, ಮಲ್ಲೇಶ್, ಗುಡಿ ಅರ್ಚಕ ಅನಿಲ್ ಕುಮಾರ್ ಶರ್ಮಾ ಇನ್ನಿತರರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿಟೆಕ್ ಬಯೋಮೆಡಿಕಲ್ ಎಂಜಿನಿಯರಿಂಗ್

ಬಿಟೆಕ್ ಬಯೋಮೆಡಿಕಲ್ ಎಂಜಿನಿಯರಿಂಗ್ 4 ವರ್ಷಗಳ ಅವಧಿಯ ಯುಜಿ ಎಂಜಿನಿಯರಿಂಗ್ ಕಾರ್ಯಕ್ರಮವಾಗಿದೆ. ಜೀವಗಳನ್ನು ಗುಣಪಡಿಸಲು, ಸುಧಾರಿಸಲು ಮತ್ತು ಉಳಿಸಲು ಜೀವಶಾಸ್ತ್ರದ ಮೂಲಭೂತ ಅಂಶಗಳನ್ನು ಎಂಜಿನಿಯ-ರಿಂಗ್ ಅನ್ವಯಿಕೆಗಳೊಂದಿಗೆ ಹೇಗೆ ಸಂಯೋಜಿಸುವುದು ಎಂಬುದನ್ನು ಈ ಕೋರ್ಸ್ ವಿದ್ಯಾರ್ಥಿಗಳಿಗೆ ಕಲಿಸುತ್ತದೆ. ಪಿಸಿಎಂ/ಬಿ ವಿಷಯಗಳಲ್ಲಿ ಕನಿಷ್ಠ 50 ರಿಂದ 60 ಪ್ರತಿಶತ ಅಂಕಗಳೊಂದಿಗೆ 12 ನೇ ತರಗತಿಯಲ್ಲಿ ಉತ್ತೀರ್ಣರಾಗುವುದು ಪ್ರವೇಶಕ್ಕೆ ಮೂಲ ಅರ್ಹತೆಯಾಗಿದೆ. ಯುಜಿ ಕೋರ್ಸ್‌ಗಳಿಗೆ ಬಯೋಮೆಡಿಕಲ್ ಎಂಜಿನಿಯರಿಂಗ್ ಪ್ರವೇಶ ಪ್ರಕ್ರಿಯೆಯು 12 ನೇ ತರಗತಿಯ ಮೆರಿಟ್ ಮತ್ತು ಪ್ರವೇಶ ಪರೀಕ್ಷೆಯ ಅಂಕಗಳನ್ನು ಆಧರಿಸಿದೆ. ಪ್ರವೇಶಕ್ಕಾಗಿ ಕೆಲವು ಪ್ರಮುಖ ಪ್ರವೇಶ ಪರೀಕ್ಷೆಗಳು ಜೆಇಇ ಮುಖ್ಯ ಮತ್ತು ಜೆಇಇ ಅಡ್ವಾನ್ಸ್ಡ್, ಟಿಎನ್‌ಇಎ ಕೌನ್ಸೆಲಿಂಗ್, ಸಿಯುಇಟಿ, ಎಂಎಚ್‌ಟಿ ಸಿಇಟಿ, ಇತ್ಯಾದಿ. ಬಿಟೆಕ್ ಬಯೋಮೆಡಿಕಲ್ ಎಂಜಿನಿಯರಿಂಗ್‌ಗಾಗಿ ಜನಪ್ರಿಯ ಕಾಲೇಜುಗಳಲ್ಲಿ ಐಐಟಿ ಮದ್ರಾಸ್, ಎಸ್‌ಆರ್-ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ, ಐಐಟಿ ಕಾನ್ಪುರ್, ಐಐಟಿ ಹೈದರಾಬಾದ್, ಇತ್ಯಾದಿ ಸೇರಿವೆ. ಬಿಟೆಕ್ ಬಯೋಮೆಡಿಕಲ್ ಎಂಜಿನಿಯರಿಂಗ್ ಅಭ್ಯರ್ಥಿಗಳು ಬಯೋಮೆಡಿಕಲ್ ಎಂಜಿನಿಯರ್‌ಗಳು, ಪ್ರಾಡಕ್ಟ್ ಡೆವಲಪ್‌ಮೆಂಟ್ ಎಂಜಿನಿಯರ್‌ಗಳು, ಬಯೋಮೆಡಿಕಲ್ ರಿಸರ್ಚ್ ಸೈಂಟಿಸ್ಟ್‌ಗಳು ಮುಂತಾದ ಉದ್ಯೋಗಗಳಿಗೆ ಹೋಗಬಹುದು. ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಪನೇಸಿಯಾ ಬಯೋಟೆಕ್ ಲಿಮಿಟೆಡ್, ಶಾಂತ ಬಯೋಟೆಕ್, ಇತ್ಯಾದಿಗಳು ಉನ್ನತ ನೇಮಕಾತಿದಾರರಾಗಿದ್ದಾರೆ.

## ಕೇಂದ್ರ-ರಾಜ್ಯ ಸರ್ಕಾರಗಳ ಹಗ್ಗಜಗ್ಗಾಟ: ಉದ್ಯೋಗಕ್ಕಿಲ್ಲ 'ಖಾತ್ರಿ', ಗುಳೆಯ ಆತಂಕ

ನೈಜ್ಯ ದೆಸೆ ನ್ಯೂಸ್

**ಅರಕೇರಾ ತಾಲೂಕಿನ ಬಿ.ಗಣೇಕಲ್ ಗ್ರಾಮದ ಕೂಲಿಕಾರ್ಮಿಕ-ರಿಗೆ ಗ್ರಾಮ ಪಂಚಾಯತ ವ್ಯಾಪ್ತಿಯ ಕಾರ್ಮಿಕ-ರಿಗೆ ಕೆಲಸ ನೀಡಿದ್ದು ಆದರೆ ಹಲವಾರು ಸಮಸ್ಯೆಗಳ ಮಧ್ಯೆ ಕಾರ್ಮಿಕರು ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲಾ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆ ಹೆಸರು ಮತ್ತು ಸ್ವರೂಪ ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರ ವಿಬಿ -ಜಿ- ರಾಮ್ ಜೀ ಹೆಸರಿನಲ್ಲಿ ಹೊಸ ಮಾದರಿಯಲ್ಲಿ ಯೋಜನೆ ಅನುಷ್ಠಾನ ಮಾಡಲು ಮುಂದಾಗಿದೆ.**



ಈ ಯೋಜನೆಯಡಿ ರಾಜ್ಯಗಳು ಕೂಡ ಅನುದಾನದ ಪಾಲು ನೀಡಬೇಕಿರುವ ಕಾರಣ ಕಾರ್ಯರೂಪಕ್ಕೆ ರಾಜ್ಯ ಸರ್ಕಾರ ಹಿಂದೇಟು ಹಾಕಿದ್ದು, ಕೇಂದ್ರ?ರಾಜ್ಯ ನಡುವಿನ ತಿಕ್ಕಾಟ ಕೂಲಿ ಕಾರ್ಮಿಕರಿಗೆ ಸಂಕಷ್ಟ ತಂದೊಡ್ಡಿದೆ. ಮನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿ, ಕೆರೆ ನಿರ್ಮಾಣ, ಬದು ನಿರ್ಮಾಣ ಹೀಗೆ ವಿವಿಧ ಕೆಲಸಗಳನ್ನು ಮಾಡಿಕೊಳ್ಳಲು ಜನರಿಗೆ ಅವಕಾಶವಿತ್ತು. ಒಬ್ಬ ಕೂಲಿ ಕಾರ್ಮಿಕನಿಗೆ ವಾರ್ಷಿಕ ನೂರು ದಿನ ಸ್ಥಳೀಯವಾಗಿಯೇ ಕೆಲಸ ಸಿಕ್ಕು ಉಪಜೀವನಕ್ಕೂ ಅನುಕೂಲವಾಗುತ್ತಿತ್ತು. ಈ ವರ್ಷ ಕ್ರಿಯಾ ಯೋಜನೆಯೇ ಸಿದ್ಧವಾಗದ ಕಾರಣ ಅಧಿಕಾರಿಗಳು ಕಳೆದ ವರ್ಷದಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನೇನೀಡಿದ್ದಾರೆ ಇದರಿಂದ ಕೆಲಸವೂ ಇಲ್ಲ, ಕೂಲಿಯೂ ಇಲ್ಲ ಎನ್ನುವ ಸ್ಥಿತಿ ಕಾರ್ಮಿಕರದ್ದಾಗಿದೆ. ಒಂದೆಡೆ ಬಿರುಬಿಸಿಲು ದಿನದಿಂದ ದಿನಕ್ಕೆ ಹೆಚ್ಚಾ ಗುತ್ತಲೇ ಇದ್ದು ಮನೆಬಿಟ್ಟೂ ಬರಲಾಗದ ಸ್ಥಿತಿ ನಿರ್ಮಾಣವಾಗುತ್ತಿದ್ದು ಅಂತದರಲ್ಲಿ ಕೆಲಸ ನೀಡಿದ್ದು ಅದರಲ್ಲಿ ಸರ್ವರ್ ತೊಂದರೆಯಿಂದ ಕಾರ್ಮಿಕರ ಹಾಜರಾತಿ ಹಾಕಲು ತೀವ್ರ ಸಮಸ್ಯೆಯಾಗಿದೆ ಇದರಿಂದ ಅಳತೆ ಪ್ರಕಾರ ಕೆಲಸ ಮಾಡಲು ಬಹಳ ತೊಂದರೆ ಆಗುತ್ತಿದೆ ಎಂದು ಕಾರ್ಮಿಕರು ಅಧಿಕಾರಿಗಳ ವಿರುದ್ಧ ಬೇಸರ ವ್ಯಕ್ತ ಪಡಿಸಿದರು. ಹೇಳಿಕೆ "ನರೇಗಾ ಕೆಲಸ ಉಪಜೀವನಕ್ಕೆ ಆಸರೆಯಾಗಿ-ತ್ತು. ಸ್ಥಳೀಯವಾಗಿಯೂ ಕೆಲಸ ಸಿಗುತ್ತಿದ್ದರಿಂದ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತಿತ್ತು. ಈಗ ಕೂಲಿ ಕೆಲಸ ಸಿಗುತ್ತಿಲ್ಲ, ಹೋದವರ್ಷ ಕೊಟ್ಟ ಕೆಲಸದ ವೇತನವೇ ತಡವಾಗಿ ಬಂದಿದೆ. ಗುಳೆ ಹೋಗುವುದು ಅನಿವಾರ್ಯವಾಗಿದೆ" ನೀಲಮ್ಮಮಂಡ್ಲಿ ಕೂಲಿ ಕಾರ್ಮಿಕರು ಬಿ.ಗಣೇಕಲ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಪಾಮನಕಲ್ಲೂರು: ಅದ್ದೂರಿಯಾಗಿ ನಡೆದ ಆದಿ ಬಸವೇಶ್ವರ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಪಾಮನಕಲ್ಲೂರು ಗ್ರಾಮದ ಹೊರವಲಯದಲ್ಲಿರುವ ಶ್ರೀ ಆದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಆದಿ ಬಸವೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಸೋಮವಾರ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು. ಪ್ರತಿ ವರ್ಷ ಬಸವ ಜಯಂತಿಯಂದು ನಡೆಯುವಂತೆ ಈ ವರ್ಷವೂ ಬಸವ ಜಯಂತಿ ದಿನವಾದ ಸೋಮವಾರ ಬೆಳಗ್ಗೆಯಿಂದ ಆರಂಭವಾದ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಸಂಜೆ ರಥೋತ್ಸವ ( ತೇರು) ದೊಂದಿಗೆ ಸಂಪನ್ನಗೊಂಡಿತು.**

ಶ್ರೀ ಆದಿ ಬಸವೇಶ್ವರನ ಸನ್ನಿಧಿಯಲ್ಲಿ ನವಜೀವನಕ್ಕೆ ಕಾಲಿಟ್ಟ 25 ನವಜೋಡಿಗಳು: ಶ್ರೀ ಆದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಜರುಗಿದವು. 25 ನವಜೋಡಿಗಳು ಆದಿ ಬಸವೇಶ್ವರ ದೇವರ ಸನ್ನಿಧಿಯಲ್ಲಿ



ಮಲದಗುಡ್ಡದ ಶ್ರೀಗಳು, ಇರಕಲ್ ಮಠದ ಶ್ರೀಗಳು, ಹುನಕುಂಟಿ ಶ್ರೀಗಳ ಆಶೀರ್ವಾದದೊಂದಿಗೆ ನವಜೀವನಕ್ಕೆ ಕಾಲಿಟ್ಟರು. ಈ ವೇಳೆ ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಬಸನಗೌಡ ತುರವಿಹಾಳ, ಪ್ರಮುಖರಾದ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಪ್ರಸನ್ನ ಪಾಟೀಲ್ ಮಸ್ಕಿ, ರವಿ ಜಾಹಗೀರದಾರ್, ಹನುಮಂತ ಸೇಳಗಿ, ಸಂತೋಷ್ ರಾಜಗುರು, ಶ್ರೀಶೈಲಪ್ಪ ಪತ್ತಾರ್, ಅಮರಯ್ಯತಾತ ಸೇರಿದಂತೆ ಅಲ್ಲಿ ನೆರೆದಿದ್ದ ಗಣ್ಯರು ನವ ಜೋಡಿಗಳಿಗೆ ಅಕ್ಷತೆ ಹಾಕಿ, ಜಂಪಲ (ಜಂಬೂ/ ಪೇರಲೆ/ ಸೀಬೆ) ಹಣ್ಣಿನ ಸಸಿ ನೀಡಿ ಶುಭ ಹಾರೈಸಿದರು.

ಪ್ರಸಾದ ವ್ಯವಸ್ಥೆ: ಜಾತ್ರೆಗೆ ಆಗಮಿಸುವ ಭಕ್ತ-ರಿಗೆ ಪ್ರತಿ ವರ್ಷವೂ ಆದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಅದರಂತೆಯೇ ಈ ವರ್ಷವೂ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

ರಥ ಎಳೆದು ಭಕ್ತಿ ಸಮರ್ಪಿಸಿದ ಭಕ್ತರು: ಶ್ರೀ ಆದಿ ಬಸವೇಶ್ವರ ಜಾತ್ರಾ ಮಹೋತ್ಸವದ



ಅಂಗವಾಗಿ ಶುಕ್ರವಾರ ಸಂಜೆ ನಡೆದ ರಥೋತ್ಸವ ಕಾರ್ಯಕ್ರಮದಲ್ಲಿ ಜಾತ್ರೆಗೆ ಆಮಿಸಿದ ಭಕ್ತರು ರಥ (ತೇರು) ಎಳೆದು ಭಕ್ತಿ ಸಮರ್ಪಿಸಿದರು.

ಸಂಜೆಯಾಗುತ್ತಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು: ಶ್ರೀ ಆದಿ ಬಸವೇಶ್ವರ ಜಾತ್ರೆಯೂ ಗ್ರಾಮದಲ್ಲಿ ನಡೆಯುವ ಜಾತ್ರೆಗಳಲ್ಲಿ ವಿಶೇಷ ಜಾತ್ರೆಯಾಗಿದ್ದು, ಸಂಜೆಯಾಗುತ್ತಿದ್ದಂತೆ ರಥೋತ್ಸವ ಕಾರ್ಯಕ್ರಮದ ಸಮಯಕ್ಕೆ ಪಾಮನಕಲ್ಲೂರು, ಚಿಕ್ಕ ಹೆಸರೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ರಥೋತ್ಸವ ಕಾರ್ಯಕ್ರಮವನ್ನು ಕಣ್ತುಂಬಿಕೊಂಡರು. ಈ ಸಂದರ್ಭದಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ ಪೂಜ್ಯರು, ಗಣ್ಯರು, ದೇವಸ್ಥಾನ ಸಮಿತಿಯವರು, ಗ್ರಾಮದ ಯುವಕರು, ಪಾಮನಕಲ್ಲೂರು, ಚಿಕ್ಕ ಹೆಸರೂರು ಸೇರಿದಂತೆ ವಿವಿಧ ಗ್ರಾಮಗಳಿಂದ ಆಮಿಸಿದ್ದ ಭಕ್ತರು ಇದ್ದರು.

## ದೇವೇಗೌಡರು ಮೊದಲ ಬಾರಿಗೆ ಪ್ರಧಾನಿಯಾದಾಗ ಮಹಿಳಾ ಮೀಸಲಾತಿ ಮಂಡಿಸಿದರು: ನಾಡಗೌಡ



ನೈಜ್ಯ ದೆಸೆ ನ್ಯೂಸ್

**1996ರಲ್ಲಿ ಎಚ್.ಡಿ.ದೇವೇಗೌಡರು ಪ್ರಧಾನಿ ಆಗಿದ್ದಾಗ ಮಹತ್ವದ ಹೆಜ್ಜೆಯಾಗಿ ಸಂಸತ್ತಿನಲ್ಲಿ ಮೊದಲ ಬಾರಿಗೆ ಶೇ.33 ರಷ್ಟು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದರು. ಅಂದು ಬಿತ್ತಿದ ಮಹಿಳಾ ಮೀಸಲಾತಿ ಕನಸು ಇಂದು ಸಾಕಾರಗೊಳ್ಳುವ ಹಂತಕ್ಕೆ ಬಂದಿದೆ. ಆದರೆ, ದುರದೃಷ್ಟವಶಾತ್ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಇಂದಿನ ಸಂಸತ್ ಅಧಿವೇಶನದಲ್ಲಿ ಈ ಐತಿಹಾಸಿಕ ಮಸೂದೆಯನ್ನು ವಿರೋಧ ವ್ಯಕ್ತ ಪಡಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಮಾಜಿ ಸಚಿವರು ಹಾಗೂ ಕೆಐಎಫ್ ರಾಜ್ಯಾಧ್ಯಕ್ಷ ವೆಂಕಟರಾವ್ ನಾಡಗೌಡ ಹೇಳಿದರು.**

ನಗರದ ತಹಶೀಲ್ದಾರ್ ಕಚೇರಿ ಮುಂದೆ ತಾಲೂಕು ಜೆಡಿಎಸ್ ಪಕ್ಷದ ಮಹಿಳಾ ಘಟಕದ ವತಿಯಿಂದ ಹಾಗೂ ವೆಂಕಟ-ರಾವ್ ನಾಡಗೌಡರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ದೂರದೃಷ್ಟಿಯೇ ಮಹಿಳೆಯರಿಗೆ ರಾಜಕೀಯ ಶಕ್ತಿ ನೀಡುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿತ್ತು. ಆದ-'ರೆ, ಹಲವು ವರ್ಷಗಳ ಕಾಲ ಆಡಳಿತ ನಡೆಸಿದರೂ ಕೂಡ ಈ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಲು ವಿಫಲವಾದ ಕಾಂಗ್ರೆಸ್, ಈಗ ಜಾರಿಗೆ ಬರುತ್ತಿರುವ ಸಂದರ್ಭದಲ್ಲಿ ವಿರೋಧ ವ್ಯಕ್ತಪಡಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಇದು ಕೇವಲ ಒಂದು ಮಸೂದೆಗೆ ನೀಡಿದ ವಿರೋಧ ಅಷ್ಟೇ ಅಲ್ಲ, ಮಹಿಳೆಯರನ್ನು ರಾಜಕೀಯದಲ್ಲಿ ಭಾಗವಹಿಸುವಿಕೆ ಮತ್ತು ಪ್ರಗತಿಗೆ ತಡೆ ಒಡ್ಡುವಂತಹ ನಿಲುವಾಗಿ ಕಾಣಿಸುತ್ತದೆ. ಈ ಹೋರಾಟವು ಕೇವಲ ಒಂದು ಮಸೂದೆಗಾಗಿ ಅಲ್ಲ, ಮಹಿಳೆಯರ ಹಕ್ಕು, ಪ್ರತಿನಿಧಿತ್ವ ಮತ್ತು ಭವಿಷ್ಯದ ಶಕ್ತಿಗಾಗಿ! ನಾರಿ ಶಕ್ತಿಗೆ ಗೌರವ ನೀಡುವ ನಿಟ್ಟಿನಲ್ಲಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮಹಿಳಾ ಸಬಲೀಕರಣದ ಪರವಾಗಿ ನಾವೆಲ್ಲರೂ ಒಂದಾಗಿ ನಿಲ್ಲೋಣ ಎಂದರು. ಇದೇ ಸಂದರ್ಭದಲ್ಲಿ ಜಿಲಾನಿ ಪಾಷಾ, ಅಶೋಕಗೌಡ ಗದ್ರಟಗಿ, ರವಿಗೌಡ ಪನ್ನೂರು, ಸೇರಿದಂತೆ ಅನೇಕ ಜೆಡಿ-ಎಸ್ ಮುಖಂಡರು ಮಾತನಾಡಿದರು.

ಈ ವೇಳೆ: ಮುಖಂಡರಾದ ಅಭಿಷೇಕ ನಾಡಗೌಡ, ವೆಂಕಟೇಶ ನಂಜಲದಿನ್ನಿ, ಎಸ್.ಬಿ.ಟೇಲರ್, ಯುವ ನಾಯಕರಾದ ರವಿಗೌಡ ಪನ್ನೂರು, ಸೈಯಾದ್ ಆಶೀಫ್, ಬಸಯ್ಯ ಸುಗೂರೇಶ ಬಪ್ಪೂರು, ತಾಲೂಕು ಜೆಡಿಎಸ್ ಅಧ್ಯಕ್ಷೆ ಎಂ.ನಾಗಜ್ಯೋತಿ ಗಾಂಧಿನಗರ, ರೇಣುಕಾ, ನಾಗರತ್ನ, ಶರಣಮ್ಮ, ರಾಜೇಶ್ವರಿ, ಲಕ್ಷ್ಮಿ, ಶಕುಂತಲಾ, ಕಮಲಾಕ್ಷಿ, ಸಾವಿತ್ರಿ, ಬಸಮ್ಮ, ನಾಗರತ್ನ, ದೊಡ್ಡಬಸಮ್ಮ, ರಾಧಾ, ಜಯಮ್ಮ ಸೇರಿದಂತೆ ನೂರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಬಸವಣ್ಣನವರ ತತ್ವಾದರ್ಶಗಳು ಇನ್ನು ಸಾವಿರಾರು ವರ್ಷ ಕಳೆದರು ಜೀವಂತ :ಬಸವಣ್ಣೆಪ್ಪ ಕಲಶೆಟ್ಟಿ

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: 12 ನೇ ಶತಮಾನದಲ್ಲಿ ಸಮಾನತೆಗೆ ನಾಂದಿ ಹಾಡಿದ ಜಗಜ್ಯೋತಿ ಬಸವಣ್ಣನವರ ತತ್ವಾದರ್ಶಗಳು ಇನ್ನು ಸಾವಿರಾರು ವರ್ಷ ಕಳೆದರು ಜೀವಂತವಾಗಿ ಉಳಿಯಲಿವೆ ಎಂದು ಸಹಾಯಕ ಆಯುಕ್ತ ಬಸವಣೆಪ್ಪ ಕಲಶೆಟ್ಟಿ ಹೇಳಿದರು.**

ಅವರಿಂದು ಪಟ್ಟಣದ ತಹಸೀಲ್ ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರರ 893 ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ನಂತರ ಮಾತನಾಡಿದ ಅವರು, ಬಸವಣ್ಣನವರು ಮಹಾ ಮಾನವತಾವಾದಿಗಳಾಗಿದ್ದರು. ಸಮಾಜದಲ್ಲಿನ ಶೋಷಣೆ ವಿರುದ್ಧ ವಚನಗಳ ಮೂಲಕ ಧ್ವನಿಯಾಗುವ ಜೊತೆಗೆ ಸಮಾನತೆಗೆ ನಾಂದಿಹಾಡಿದರು.

ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ




ಸಂಸತ್ತಿನಲ್ಲಿ ಜನರ ಮೂಲಭೂತ ಸೌಕರ್ಯ ಮತ್ತು ದೇಶದ ಪ್ರಗತಿಯ ಕುರಿತು ಚರ್ಚೆಗಳು ನಡೆಯುತ್ತವೆ. 12ನೇ ಶತಮಾನದಲ್ಲಿಯೇ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ ಮೂಲಭೂತ ಹಕ್ಕುಗಳ ಕುರಿತು ಚರ್ಚೆಗಳನ್ನು ನಡೆಸಿದರು. ಬಸವಣ್ಣನವರ ತತ್ವಾದರ್ಶಗಳಿಗೆ ತಕ್ಕಂತಹ ಸಮಥ-'ರ ರಾಜರು ಸಿಕ್ಕಿದ್ದರೆ ಆ ಪ್ರಾಂತ್ಯ ಸುಭಿಕ್ಷೆಯಿಂದ ಕೂಡಿರುತ್ತಿತ್ತು. ಹೀಗಾಗಿ ಬಸವಣ್ಣನವರಿಗೆ ಸಾಂಸ್ಕೃತಿಕ ನಾಯಕ ಎಂಬ ಬಿರುದು ನೀಡಲಾಗಿದೆ. ಬಸವಣ್ಣನವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ಹೇಳಿದರು.

ಇದೇವೇಳೆ ಸರ್ಕಾರಿ ಉರ್ದು ಪ್ರೌಢಶಾಲೆ ಮುಖ್ಯಗುರು ಗಂಗಮ್ಮ ಯಲಬುರ್ಗಿ ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಸತ್ಯಮ್ಮ, ಅಖಿಲಭಾರತ ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣಪ್ಪ ಮೇಟಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ, ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವೆಂಕಟೇಶ ಗುತ್ತೇದಾರ, ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ಟಿಎಪಿಸಿಎಂಎಸ್ ಅಧ್ಯಕ್ಷ ಶಶಿಧರ ಪಾಟೀಲ್, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಭೂಪನಗೌಡ ಪಾಟೀಲ್ ಉಪಸ್ಥಿತರಿದ್ದರು.

## ಸಂಭ್ರಮದಿಂದ ಜರುಗಿದ ದುರ್ಗಾದೇವಿ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದಲ್ಲಿ ಮಾದರ ಚೆನ್ನಯ್ಯ ಸಮಾಜದ ದೇವತೆಯಾದ ದುರ್ಗಾದೇವಿಯ ಜಾತ್ರಾಮಹೋತ್ಸವವು ಮಂಗಳವಾರದಮದು ಭಕ್ತಿ, ಶ್ರದ್ದೆ, ಸಂಭ್ರಮಗಳಿಂದ ನೆರವೇರಿತು. ತನ್ನಿಮಿತ್ತ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬೆಳಿಗ್ಗೆ 8:00 ಘಂಟೆಗೆ ದುರ್ಗಾದೇವಿ**



**ಮೂರ್ತಿಯ ಭವ್ಯ ಮೆರವಣಿಗೆಯು ಅಂಬಾಭವಾನಿ ದೇವಸ್ಥಾನದಿಂದ ಡೊಳ್ಳು ಕುಣಿತ, ಕರಡಿ ಮಜಲು, ಭಾಬಾಜಾ ಭಜಂತ್ರಿ ಜೊತೆ ಆರಂಭವಾಗಿ ಕತ್ರಿ ಬಜಾರ ಮಾರ್ಗವಾಗಿ ಬಂದು ಮರಗಮ್ಮ ದೇವಿ ದೇವಸ್ಥಾನವನ್ನು ಸೇರಿತು.**

ನಂತರ ರಾಜವಾಡೆ ಮಾರ್ಗವಾಗಿ ಭೋವಿ ಸಮಾಜದ ಪಿಲೇಕಮ್ಮ ದೇವಿಯನ್ನು ಪೂಜಿಸಿ ವಾರ್ಡ್ ನಂಬರ್ 19 ಮಾದರ ಓಣಿಯ ಮಾದರ ಚೆನ್ನಯ್ಯ ನಗರದಲ್ಲಿ ಇರುವ ದೇವಿಯ ಗರ್ಭಗುಡಿಯನ್ನು ಪ್ರವೇಶ ಮಾಡಿದಳು ಮಧ್ಯಾಹ್ನ ಅನ್ನಪ್ರಸಾದ ನಡೆಯಿತು. ಸಂಜೆ ಧರ್ಮಸಭೆ ಹಾಗೂ ರಾತ್ರಿ ಬಸವೇಶ್ವರ ನಾಟ್ಯ ಸಂಘ ಬಾಗೇವಾಡಿ ನಾಗೂರ ಅವ-ರಿಂದ ರೇಣುಕಾ ಎಲ್ಲಮ್ಮ ದೇವಿ ಮಹಾತ್ಮೆ ನಾಟಕ ಜರುಗಿತು. ಜಾತ್ರಾ ಉತ್ಸವದಲ್ಲಿ ಪುರಸಭೆ ಮಾಜಿ ಸದಸ್ಯರಾದ ಪ್ರಭುಗೌಡ ಮದರಕಲ್ಲ, ಜೈ ಸಿಂಗ್ ಮೂಲಿಮನಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಸಮಾಜದ ಪ್ರಮುಖರಾದ ರಾಮಣ್ಣ ಕಟ್ಟಿಮನಿ, ಬಸ್ಸು ಮಾದರ, ಗೋಪಾಲ ಕಟ್ಟಿಮನಿ, ಬಸಪ್ಪ ಮಾದರ್ ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು.

# ಅರಕೇರಾದಲ್ಲಿ ಬಸವ ಜಯಂತಿ ಅದ್ದೂರಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಪಟ್ಟಣದಲ್ಲಿನ ಶ್ರೀ ಸೂಗೂರೇಶ್ವರ ದೇವಸ್ಥಾನದಿಂದ ಬಸವ ವೃತ್ತದವರೆಗೆ ತೆರೆದ ವಾಹನದಲ್ಲಿ ವಿಶ್ವಗುರು ಬಸವೇಶ್ವರ ಭಾವಚಿತ್ರವನ್ನು ಸೋಮವಾರ ಅದ್ದೂ-ರಿಯಾಗಿ ಮೆರವಣಿಗೆ ಮಾಡುವ ಮೂಲಕ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.**

ಮೇಲು ಕೀಳು ಜಾತಿ ಧರ್ಮ ಹೀಗೆ ನೊಂದವರ ಪರವಾಗಿ ನಿಂತ ಮಹಾನುಭಾವ ಜಾತಿ ವ್ಯವಸ್ಥೆಯ ವಿರುದ್ದ ಧ್ವನಿ ಎತ್ತಿದ್ದ ಬಸವಣ್ಣನವರು



ಕ್ರಾಂತಿಯ ಬೀಜವನ್ನು ಬಿತ್ತಿದ್ದ ಹರಿಕಾರ. ಬಸವಣ್ಣ ಅವರ 893 ನೇ ಜನ್ಮ ದಿನವನ್ನು ಅರಕೇರಾ ಪಟ್ಟಣದಲ್ಲಿ ಸಂಭ್ರಮದಿಂದ ಆಚರಣೆಮಾಡಲಾಯಿತು. ಅರಕೇರಾ ಪಟ್ಟಣದ ಬಸವ ವೃತ್ತದ ಬಳಿ ತಾಲೂಕು ಆಡಳಿತ,ಗ್ರಾಮ ಪಂಚಾಯತ ಹಾಗೂ ಪಟ್ಟಣದ ವೀರಶೈವ ಸಮಾಜದವತಿಯಿಂದ ಹಮ್ಮಿಕೊಂಡಿರುವ ವಿಶ್ವಗುರು ಬಸವಣ್ಣನವರ 893 ನೇ ಜಯಂತಿ ಅಂಗವಾಗಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಸಂದರ್ಭದಲ್ಲಿ ತಹಸೀಲ್ದಾರ್ ಅಮರೇಶ ಬೀರಾದರ್, ಪ್ರಮುಖರಾದ ಮಲ್ಲಿಕಾರ್ಜುನಯ್ಯ ಸ್ವಾಮಿ ಹಿರೇಮಠ, ಸತ್ಯನಾರಾಯಣ ನಾಯಕ ಪೋಲೀಸ ಪಾಟೀಲ್, ಕೆ. ಅನಂತರಾಜ ನಾಯಕ, ತಿಮ್ಮಪ್ಪ ನಾಯಕ ಪೋಲಿಸ್ ಪಾಟೀಲ್, ಡಾ. ಎಚ್.ಎ ನಾಡಗೌಡ, ವೆಂಕಟೇಶ ನಾಯಕ ದೊರೆ, ಚಂದ್ರಶೇಖರ ಶೆಟ್ಟಿ, ಪರಮೇಶ ಪೂಜಾರಿ, ಹರ್ಷವರ್ಧನ ನಾಯಕ ಕ್ವಾಟೆದೊರೆ,

ಶೇಖರಪ್ಪ ಗೌಡ ಮಾಲಿ ಪಾಟೀಲ್, ಸಿದ್ದಾರ್ಥ ಹವಲ್ದಾರ, ಜಾವೀದ್ ಆರ್ ಚಿಂಚೋಳಿಕರ್, ಗಂಗಯ್ಯ ಸ್ವಾಮಿ, ಜಿ.ಬೂದೆಪ್ಪಸಾಹುಕಾರ ಸುರೇಶ ಗುಡಿ, ಕೆ.ಮಲ್ಲಪ್ಪಸಾಹುಕಾರ, ಸೂಗೂರೇಶ ತಾಳಿಕೋಟಿ, ನಾಗರಾಜ ಕರ್ನಾಳ, ಸಿದ್ದಪ್ಪಮಾದ್ದರ ,ಅಮರೇಶ ಬಳೆಗಾರ, ಶಿವಕುಮಾರ್ ಮಾದ್ದರ ,ಬೂದೆಪ್ಪ ಕುಂಬಾರ, ಹನುಮಂತ್ರಾಯ ಕಬ್ಬೆರ, ಶಿವಗೇನಿನಾಯಕ,ದೇವಪ್ಪಸಾತಲ್,ಹನುಮಂತನಾಯಕ ಪೆಂಟಾರ್,ಆಸ್ರಿಪ್‌ಖಾನ್ ಸೇರಿದಂತೆ ಪಟ್ಟಣದ ನಿವಾಸಿಗಳು ಸೇರಿದಂತೆ ಗ್ರಾಮ ಪಂಚಾಯತ ಸಿಬ್ಬಂದಿವರ್ಗವದರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.